24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 15 | ನವದೆಹಲಿ | ಬೆಲೆ ₹10 | ಜುಲೈ 11 2026, ಶನಿವಾರ



24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಜುಲೈ 11 2026, ಶನಿವಾರ

## ಒಳಪುಟಗಳಲ್ಲಿ

ರಾಮಮಂದಿರ ದೇಣಿಗೆ ದುರ್ಬಳಕೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ, 30 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ ಉತ್ತರ ಪ್ರದೇಶ ಪೊಲೀಸರು - ಪು.4

ರಸ್ತೆಬದಿ ವಾಹನ ನಿಲ್ಲಿಸಿದರೆ ದಂಡ ಖಚಿತ

ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಎಚ್ಚರಿಕೆ - ಪು.5

ಸ್ವಯಂಪ್ರೇರಿತ ಅಂಗದಾನ ನೋಂದಣಿ ಕೇಂದ್ರಕ್ಕೆ ಸಚಿವ ಖಾದರ್ ಚಾಲನೆ - ಪು.6

# ಬೆಂಗಳೂರನ್ನು ಮತ್ತಷ್ಟು ಸ್ವಚ್ಛ, ಸುರಕ್ಷಿತ ಸುಂದರ ನಗರ ಮಾಡೋಣ

**ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ**

**ರಾಜಧಾನಿಯ ಹಲವೆಡೆ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯ ಪರಿಶೀಲನೆ**



**ಬೆಂಗಳೂರು, ಜು.10:** ಎಲ್ಲರೂ ಜೊತೆಗೂಡಿ ನಮ್ಮ ಬೆಂಗಳೂರನ್ನು ಸುಂದರ ನಗರವನ್ನಾಗಿ ಮಾಡೋಣ ಎಂದು ಸಿಎಂ ಡಿಕೆ ಶಿವಕುಮಾರ್ ಕರೆ ನೀಡಿದರು.

ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ ನಗರದ ಎಚ್.ಎ.ಎಲ್ ಹಳೇ ವಿಮಾನ ನಿಲ್ದಾಣ ರಸ್ತೆ, ಎಚ್.ಎಸ್.ಆರ್ ಲೇಔಟ್, ಜಯನಗರ 4ನೇ ಬ್ಲಾಕ್ ಹಾಗೂ ಅಶೋಕ ಪಿಲ್ಲರ್ ಪ್ರದೇಶಗಳಲ್ಲಿ ನಡೆಯುತ್ತಿರುವ ಪಾದಚಾರಿ ಮಾರ್ಗ ಒತ್ತುವರಿ ತೆರವು ಮತ್ತು ದುರಸ್ತಿ ಕಾರ್ಯವನ್ನು ಮುಖ್ಯಮಂತ್ರಿಗಳು ಖುದ್ದಾಗಿ ವೀಕ್ಷಿಸಿ, ಪ್ರಗತಿ ಪರಿಶೀಲನೆ ನಡೆಸಿದರು.

ಮಾಧ್ಯಮದವರ ಜತೆ ಮಾತನಾಡಿ, ಪಾದಚಾರಿಗಳ ಸುರಕ್ಷತೆಗಾಗಿ ಬೃಹತ್ ಬೆಂಗಳೂರು ಪ್ರಾಧಿಕಾರವು ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನಕ್ಕೆ ಚಾಲನೆ ನೀಡಿದೆ. ಬೃಹತ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ಈ ಯೋಜನೆಯು ತೀವ್ರಗತಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ.

ಈಗಾಗಲೇ ನಗರದಾದ್ಯಂತ 430 ಕಿ.ಮೀ.ಗಿಂತಲೂ ಅಧಿಕ ಉದ್ದದ ಪಾದಚಾರಿ ಮಾರ್ಗಗಳನ್ನು ಒತ್ತುವರಿಯಿಂದ ಮುಕ್ತಗೊಳಿಸಲಾಗಿದ್ದು, ಪಾದಚಾರಿಗಳ ಸುಲಭ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಯಾವುದೇ ಮುಲಾಜಿಲ್ಲದೆ ಈ ಕಾರ್ಯಾಚರಣೆ ಮುಂದುವರಿಯಲಿದೆ ಎಂದರು. ಇದೇ ವೇಳೆ, ಬೀದಿಬದಿ ವ್ಯಾಪಾರಿಗಳ ಹಿತರಕ್ಷಣೆಗೂ ಸರ್ಕಾರ ಬದ್ಧವಾಗಿದೆ. ನೋಂದಾಯಿತ ವ್ಯಾಪಾರಿಗಳಿಗೆ ಪ್ರತ್ಯೇಕ ವಲಯಗಳನ್ನು ಗುರುತಿಸಿ, ತಳ್ಳುವ ಬಂಡಿಗಳನ್ನು ವಿತರಿಸಲಾಗುವುದು. ಇದರಿಂದ ಅವರ ಜೀವನೋಪಾಯಕ್ಕೂ ಧಕ್ಕೆಯಾಗುವುದಿಲ್ಲ, ಇತ್ತ ಪಾದಚಾರಿಗಳ ಹಕ್ಕನ್ನೂ ರಕ್ಷಿಸಿದಂತಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಈ ಅಭಿಯಾನ ಮತ್ತಷ್ಟು ಚುರುಕುಗೊಳ್ಳಲಿದ್ದು, ಫುಟ್‌ಪಾತ್‌ಗಳ ಮೇಲೆ ಅಡ್ಡಾದಿಡ್ಡಿಯಾಗಿ ಬಿಟ್ಟುಹೋಗಿರುವ ಹಳೇ ವಾಹನಗಳನ್ನು ಸಹ ತೆರವುಗೊಳಿಸಲಾಗುವುದು ಎಂದರು.ಇಲ್ಲಿಯವರೆಗೆ ಅಂಗಡಿ ಮುಂಗಟ್ಟುಗಳು ರಸ್ತೆ ಆಕ್ರಮಿಸಿಕೊಂಡಿದ್ದ ಸಾವಿರಾರು ಪ್ರಕರಣಗಳು ಸೇರಿದಂತೆ ಒಟ್ಟು 9,878 ವಿವಿಧ ರೀತಿಯ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಕೇವಲ ಒತ್ತುವರಿ ತೆರವು ಅಷ್ಟೇ ಅಲ್ಲದೆ, ಹಾಳಾಗಿರುವ ಪಾದಚಾರಿ ಮಾರ್ಗಗಳ ದುರಸ್ತಿ ಕಾರ್ಯವೂ ಭರದಿಂದ ಸಾಗುತ್ತಿದ್ದು, ಸಾರ್ವಜನಿಕರ ಬಳಕೆಗೆ ಯೋಗ್ಯವಾಗುವಂತೆ ಸಿದ್ಧಪಡಿಸಲಾಗುತ್ತಿದೆ. ಈ ಮಹತ್ವಾಕಾಂಕ್ಷಿ ಅಭಿಯಾನಕ್ಕೆ ಕೈಜೋಡಿಸಿರುವ ಬೆಂಗಳೂರಿನ ಪ್ರತಿಯೊಬ್ಬ ನಾಗರಿಕರಿಗೆ, ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಹಭಾಗಿಗಳಿಗೆ ನನ್ನ ಅಭಿನಂದನೆಗಳು. ಎಲ್ಲರೂ ಜೊತೆಗೂಡಿ ನಮ್ಮ ಹೆಮ್ಮೆಯ ನಮ್ಮ ಬೆಂಗಳೂರನ್ನು ಮತ್ತಷ್ಟು ಸ್ವಚ್ಛ, ಸುರಕ್ಷಿತ ಹಾಗೂ ಸುಂದರ ನಗರವನ್ನಾಗಿ ಮಾಡೋಣ ಎಂದರು.

# ಈ ಬಾರಿ 11 ದಿನ ವಿಜೃಂಭಣೆಯ ದಸರಾ: ಸಿಎಂ ಡಿ.ಕೆ. ಶಿವಕುಮಾರ್



**ಬೆಂಗಳೂರು, ಜು.10:** ಅಭಾವ ಪರಿಸ್ಥಿತಿಯ ನಡುವೆಯೂ ನಾಡಹಬ್ಬ ದಸರಾ ಹಬ್ಬವನ್ನು ಈ ಬಾರಿ 11 ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದ್ದು, ಕರ್ನಾಟಕ ರಾಜ್ಯದ ಎಲ್ಲಾ ಸಂಸ್ಕೃತಿ ಪರಂಪರೆಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ನಾಡಹಬ್ಬ ದಸರಾ– 2026 ಆಚರಣೆ ಸಂಬಂಧ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವಭಾವಿ ಸಭೆ ಬಳಿಕ ಶಿವಕುಮಾರ್ ಅವರು ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರು.

ಈ ಬಾರಿಯ ದಸರಾ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 26ರಂದು ಬೆಳಗ್ಗೆ 10 ಗಂಟೆಗೆ ಗಜಪೂಜೆ ನಡೆಯಲಿದೆ. ದಸರಾ ಉದ್ಘಾಟನೆ ಅಕ್ಟೋಬರ್ 11ರಂದು ಬೆಳಗ್ಗೆ 11.50ಕ್ಕೆ ನಿಗದಿ ಮಾಡಲಾಗಿದೆ. ಜಂಬುಸವಾರಿ, ನಂದಿಪೂಜೆ ಕಾರ್ಯಕ್ರಮವನ್ನು ಅಕ್ಟೋಬರ್ 21ರಂದು ಮಧ್ಯಾಹ್ನ 1.30ಕ್ಕೆ ನಡೆಸಲಾಗುವುದು. ಜಂಬೂಸವಾರಿ ಪುಷ್ಪಾರ್ಚನೆಯನ್ನು ಅಂದೇ ಸಂಜೆ 4.10ಕ್ಕೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಮಾಹಿತಿ ನೀಡಿದರು. ದಸರಾ ಉದ್ಘಾಟನೆಯನ್ನು ಯಾರು ಮಾಡಬೇಕೆಂಬ ಎಂಬ ಬಗ್ಗೆ ಮುಖ್ಯಮಂತ್ರಿಗಳ ತೀರ್ಮಾನಕ್ಕೆ ಬಿಡಲಾಯಿತು.

**■ ಅ.11 ದಸರಾ ಉದ್ಘಾಟನೆ,**
**■ ಅ.21ಕ್ಕೆ ಜಂಬೂ ಸವಾರಿ**

**ಬರಗಾಲ ಕಾರಣಕ್ಕೆ ದಸರಾ ನಿಲ್ಲಿಸುವ, ಸರಳವಾಗಿ ಆಚರಿಸುವ ಪ್ರಶ್ನೆ ಇಲ್ಲ:** ಐತಿಹಾಸಿಕ ಮೈಸೂರು ದಸರಾ ಪಾರಂಪರಿಕ ಉತ್ಸವವಾಗಿದ್ದು, ರಾಜ್ಯದ ಹೆಮ್ಮೆ. ಪ್ರತಿವರ್ಷ ಉತ್ಸವದ ಸ್ವರೂಪ ಬದಲಾಗುತ್ತಿದೆ. ಅಂತಾರಾಷ್ಟ್ರೀಯ ಖ್ಯಾತಿಗೆ ತಕ್ಕ ಹಾಗೆ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಕಾರ್ಯಕ್ರಮ ಮಾಡಲಾಗುವುದು. ಬರಗಾಲ ಎಂಬ ಕಾರಣಕ್ಕೆ ಸ್ವಲ್ಪ ಹಣ ಉಳಿಸಲು ಹೋಗಿ ನಮ್ಮ ಸಂಸ್ಕೃತಿ ಪರಂಪರೆಯ ವೈಭವವನ್ನು ಕಡಿಮೆ ಮಾಡುವುದು ಬೇಡ. ಬರಗಾಲ ಕಾರಣದಿಂದ ದಸರಾ ನಿಲ್ಲಿಸೋ, ಸರಳವಾಗಿ ಆಚರಣೆ ಮಾಡೋ ಪ್ರಶ್ನೆಯೇ ಇಲ್ಲ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಭೆಯಲ್ಲಿ ಮೈಸೂರಿನ ಶಾಸಕರಾದ ತನ್ವೀರ್ ಸೇಠ್, ಶ್ರೀವತ್ಸ, ಹರೀಶ್ ಗೌಡರು, ಜಿ.ಟಿ ದೇವೇಗೌಡ, ಮಹದೇವಪ್ಪ ಅವರು ಸಹಕಾರ ನೀಡಿದ್ದಾರೆ. ಸಂಸತ್ ಸದಸ್ಯರು ಅನೇಕ ಸಲಹೆ ನೀಡಿದ್ದಾರೆ ಎಂದು ತಿಳಿಸಿದರು.

### ಏರ್ ಶೋ ಆಯೋಜಿಸುವ ಬಗ್ಗೆ ಕೇಂದ್ರಕ್ಕೆ ಮನವಿ

**ಇಂದಿನ ಸಭೆಯಲ್ಲಿ ಅನೇಕ ಸಲಹೆಗಳು ಬಂದಿದೆ. ದಸರಾ ಆಯೋಜನೆ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಕಾರ್ಯಕಾರಿ ಸಮಿತಿ ರಚನೆ ಮಾಡಲಿದ್ದೇನೆ. ಈ ಬಾರಿ ಏರ್‌ಶೋ ನಡೆಸಲು ಕೇಂದ್ರ ಸರ್ಕಾರದ ಬಳಿ ಮನವಿ ಮಾಡಬೇಕು ಎಂದು ಸಲಹೆ ಬಂದಿದೆ. ಹೀಗಾಗಿ ಈ ವಿಚಾರವಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.**

# ಎಸ್‌ಐಆರ್ ಪ್ರಕ್ರಿಯೆ ನೆಪ: ಡಿಸೆಂಬರ್‌ವರೆಗೆ ಜಿಬಿಎ ಚುನಾವಣೆ ಮುಂದೂಡಲು ಮನವಿ

**ನವದೆಹಲಿ, ಜು.10:** ಗ್ರೇಟರ್ ಬೆಂಗಳೂರು ಅಥಾರಿಟಿ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಡಿಸೆಂಬರ್‌ವರೆಗೆ ಮುಂದೂಡಲು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದೆ. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲದಿರುವುದು, ಚುನಾವಣೆಗೆ ಅಗತ್ಯ ಸಿಬ್ಬಂದಿ ಕೊರತೆ ಹಾಗೂ ನಿಖರ ಮತದಾರರ ಪಟ್ಟಿಯ ಅಗತ್ಯವನ್ನು ಸರ್ಕಾರ ತನ್ನ ಪ್ರಮುಖ ಕಾರಣಗಳಾಗಿ ಉಲ್ಲೇಖಿಸಿದೆ.

ಸರ್ಕಾರದ ಮನವಿಯ ಪ್ರಕಾರ, ಬೆಂಗಳೂರಿನಲ್ಲಿ ಕೇಂದ್ರ ಚುನಾವಣಾ ಆಯೋಗದ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಕರಡು ಮತದಾರರ ಪಟ್ಟಿಯ ಪ್ರಕಟಣೆ, ಸಾರ್ವಜನಿಕರಿಂದ ಆಕ್ಷೇಪಣೆಗಳು ಮತ್ತು ಹಕ್ಕು–ದಾವೆಗಳ ಸ್ವೀಕಾರ, ಅವುಗಳ ವಿಚಾರಣೆ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ ಸೇರಿದಂತೆ ಹಲವು ಹಂತಗಳ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಈಗ ಚುನಾವಣೆ ನಡೆಸುವುದು ಸೂಕ್ತವಲ್ಲ ಎಂದು ಸರ್ಕಾರ ತಿಳಿಸಿದೆ.

ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದಲ್ಲಿ ಸುಮಾರು 8,972 ಬೂತ್ ಮಟ್ಟದ ಅಧಿಕಾರಿಗಳು, 938 ಮೇಲ್ವಿಚಾರಕರು, 28 ಚುನಾವಣಾ ನೋಂದಣಿ ಅಧಿಕಾರಿಗಳು ಹಾಗೂ 75 ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳು ಸೇರಿದಂತೆ ಸಾವಿರಾರು ಸಿಬ್ಬಂದಿ ತೊಡಗಿಸಿಕೊಂಡಿದ್ದಾರೆ. ಇದೇ ಸಿಬ್ಬಂದಿಯನ್ನು ಜಿಬಿಎ ಚುನಾವಣೆಗೂ ಬಳಸಬೇಕಾಗಿರುವುದರಿಂದ ಆಡಳಿತಾತ್ಮಕ ತೊಂದರೆ ಎದುರಾಗಲಿದೆ ಎಂದು ಸರ್ಕಾರ ಹೇಳಿದೆ.

ಜಿಬಿಎ ಚುನಾವಣೆ ಯಶಸ್ವಿಯಾಗಿ ನಡೆಸಲು ಸುಮಾರು 60 ಸಾವಿರ ಸಿಬ್ಬಂದಿ ಅಗತ್ಯವಿದೆ. ಮತಗಟ್ಟೆ ಸಿಬ್ಬಂದಿ, ರಿಟರ್ನಿಂಗ್ ಅಧಿಕಾರಿಗಳು, ಭದ್ರತಾ ಸಿಬ್ಬಂದಿ ಸೇರಿದಂತೆ ವಿವಿಧ ಹಂತಗಳಲ್ಲಿ ದೊಡ್ಡ ಪ್ರಮಾಣದ ಮಾನವ ಸಂಪನ್ಮೂಲ ಬೇಕಾಗುತ್ತದೆ. ಆದರೆ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿರುವ ಕಾರಣ ಅಗತ್ಯ ಸಿಬ್ಬಂದಿಯನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದು ಸರ್ಕಾರ ನ್ಯಾಯಾಲಯದ ಗಮನಕ್ಕೆ ತಂದಿದೆ.

**ಸಿಬ್ಬಂದಿ ಕೊರತೆ, ನಿಖರ ಮತದಾರಪಟ್ಟಿ ಮತ್ತಿತರ ಕಾರಣ ಉಲ್ಲೇಖಿಸಿ ಸುಪ್ರೀಂ ಕೋರ್ಟ್‌ಗೆ ಕರ್ನಾಟಕ ಸರ್ಕಾರ ಕೋರಿಕೆ**

ಬೆಂಗಳೂರು ನಗರದಲ್ಲಿ ಸುಮಾರು 1.03 ಕೋಟಿ ಮತದಾರರು ಇದ್ದು, ಮತದಾರರ ಪಟ್ಟಿಯ ಪರಿಷ್ಕರಣೆಗಾಗಿ ಸುಮಾರು 40 ಲಕ್ಷ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕಿದೆ. ಇದಲ್ಲದೆ ಕರಡು ಮತದಾರರ ಪಟ್ಟಿಗೆ ಲಕ್ಷಾಂತರ ಆಕ್ಷೇಪಣೆಗಳು ಸಲ್ಲಿಕೆಯಾಗುವ ಸಾಧ್ಯತೆ ಇದೆ. ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಒಂದು ಲಕ್ಷಕ್ಕೂ ಹೆಚ್ಚು ಅರ್ಜಿಗಳು ಹಾಗೂ ಆಕ್ಷೇಪಣೆಗಳು ಬರಬಹುದು ಎಂದು ಸರ್ಕಾರ ಅಂದಾಜಿಸಿದ್ದು, ಪ್ರತಿಯೊಂದು ಅರ್ಜಿಯನ್ನೂ ವಿಚಾರಣೆ ನಡೆಸಿ ಆದೇಶ ನೀಡುವುದು ಕಡ್ಡಾಯ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದೆ.

ನಿಖರ ಹಾಗೂ ಅಂತಿಮ ಮತದಾರರ ಪಟ್ಟಿಯಿಲ್ಲದೆ ಚುನಾವಣೆ ನಡೆಸಿದರೆ ಅದು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯ ತತ್ವಕ್ಕೆ ವಿರುದ್ಧವಾಗಬಹುದು. ಆದ್ದರಿಂದ ಮೊದಲು ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಮುಗಿಸಿ, ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದ ಬಳಿಕವೇ ಜಿಬಿಎ ಚುನಾವಣೆ ನಡೆಸುವುದು ಸೂಕ್ತ ಎಂದು ಸರ್ಕಾರ ತನ್ನ ಮನವಿಯಲ್ಲಿ ಪ್ರತಿಪಾದಿಸಿದೆ.

ಈ ಎಲ್ಲ ಕಾರಣಗಳಿಂದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಪೂರ್ಣಗೊಳ್ಳಲು ಹಾಗೂ ಚುನಾವಣೆಗೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲು ಡಿಸೆಂಬರ್‌ವರೆಗೆ ಕಾಲಾವಕಾಶ ನೀಡುವಂತೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

# 3 ವರ್ಷಗಳ ಬಳಿಕ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಚೇತರಿಕೆ

**ನವದೆಹಲಿ, ಜು.10:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸತತವಾಗಿ ಎರಡು ದಿನ ಮಳೆಯಾದ ಪರಿಣಾಮ ಗಾಳಿಯ ಗುಣಮಟ್ಟದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ. ಮೂರು ವರ್ಷಗಳ ಬಳಿಕ ಮೊದಲ ಬಾರಿಗೆ ವಾಯುಗುಣಮಟ್ಟ ಸೂಚ್ಯಂಕ (ಎಕ್ಯುಐ) ಉತ್ತಮ ವರ್ಗಕ್ಕೆ ಇಳಿದಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ದೆಹಲಿಯ ಎಕ್ಯುಐ 48ಕ್ಕೆ ದಾಖಲಾಗಿದ್ದು, 0ರಿಂದ 50ರ ನಡುವಿನ ಎಕ್ಯುಐ ಅನ್ನು ಉತ್ತಮ ವರ್ಗವೆಂದು ಪರಿಗಣಿಸಲಾಗುತ್ತದೆ. ಗುರುವಾರದಂದು ಎಕ್ಯುಐ 59 ದಾಖಲಾಗಿದ್ದರೆ, ನಿರಂತರ ಮಳೆಯಿಂದಾಗಿ ಅದು ಮತ್ತಷ್ಟು ಇಳಿಕೆಯಾಗಿ ಶುಕ್ರವಾರ 48ಕ್ಕೆ ತಲುಪಿದೆ. ಸತತ ಮುಂಗಾರು ಮಳೆಯು ವಾತಾವರಣದಲ್ಲಿದ್ದ ಪಿಎಂ 2.5, ಪಿ.ಎ.10 ಸೇರಿ ಧೂಳು ಮತ್ತು ಇತರ ಮಾಲಿನ್ಯಕಾರಿ ಕಣಗಳನ್ನು ಕೊಚ್ಚಿಕೊಂಡು ಹೋಗಿದೆ. ಈ ಪ್ರಕ್ರಿಯೆಯನ್ನು ವೆಟ್ ಡಿಪಾಸಿಷನ್ ಅಥವಾ ವಾಷ್‌ಔಟ್ ಎಫೆಕ್ಟ್ ಎಂದು ಕರೆಯಲಾಗುತ್ತದೆ. ಮಳೆ ಜೊತೆಗೆ ಬಲವಾದ ಗಾಳಿ ಮತ್ತು ಹೆಚ್ಚಿನ ಆರ್ದ್ರತೆಯೂ ಗಾಳಿಯನ್ನು ಶುದ್ಧಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ತಜ್ಞರು ಹೇಳಿದ್ದಾರೆ.

ಸಿಪಿಸಿಬಿ 2015ರಲ್ಲಿ ಎಕ್ಯುಐ ವ್ಯವಸ್ಥೆಯನ್ನು ಜಾರಿಗೆ ತಂದ ಬಳಿಕ ದೆಹಲಿಯ ಕೇವಲ 15 ದಿನ ಮಾತ್ರ ಉತ್ತಮ ಗಾಳಿ ಗುಣಮಟ್ಟ ದಾಖಲಾಗಿದೆ. ಸರಾಸರಿ ವರ್ಷಕ್ಕೆ ಒಂದು ಅಥವಾ ಎರಡು ದಿನಗಳಷ್ಟೇ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೊನೆಯದಾಗಿ 2023ರ ಸೆಪ್ಟೆಂಬರ್ 10ರಂದು ಜಿ–20 ಶೃಂಗಸಭೆಯ ಹಿನ್ನೆಲೆಯಲ್ಲಿ ಜಾರಿಗೊಂಡ ನಿರ್ಬಂಧ ಹಾಗೂ ಮಳೆಯ ಪರಿಣಾಮ ಉತ್ತಮ ಗಾಳಿ ಗುಣಮಟ್ಟ ದಾಖಲಾಗಿತ್ತು. 2020ರ ಕೋವಿಡ್ ಲಾಕ್‌ಡೌನ್ ಅವಧಿಯಲ್ಲೂ ಐದು ದಿನಗಳ ಕಾಲ ಇದೇ ರೀತಿ ಪರಿಸ್ಥಿತಿ ಕಂಡುಬಂದಿತ್ತು.

ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್ಮೆಂಟ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಅನುಮಿತಾ ರಾಯ್‌ಚೌಧುರಿ ಅವರ ಪ್ರಕಾರ, ಮುಂಗಾರು ಮಳೆಯು ವಾಯುಮಾಲಿನ್ಯವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡುವ ನೈಸರ್ಗಿಕ ಪ್ರಕ್ರಿಯೆಯಾಗಿದೆ. ಆದರೆ ಇದು ಶಾಶ್ವತ ಪರಿಹಾರವಲ್ಲ. ವಾಹನ, ಕೈಗಾರಿಕೆ, ನಿರ್ಮಾಣ ಚಟುವಟಿಕೆಗಳು ಹಾಗೂ ತ್ಯಾಜ್ಯ ಸುಡುವಿಕೆಯಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಿದಾಗ ಮಾತ್ರ ದೀರ್ಘಕಾಲಿಕವಾಗಿ ಗಾಳಿ ಗುಣಮಟ್ಟವನ್ನು ಸುಧಾರಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

# ಸರ್ಕಾರಿ ಶಾಲೆ ಮುಚ್ಚುವ ಮಟ್ಟಿಗೆ ಕರ್ನಾಟಕ ಸರ್ಕಾರ ದಿವಾಳಿ

**ನವದೆಹಲಿ, ಜು.10:** ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಆಸರೆಯಾಗಿದ್ದ ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚುವ ಸ್ಥಿತಿಗೆ ತರುವ ಮೂಲಕ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಆಡಳಿತಾತ್ಮಕ ದಿವಾಳಿತನ ಪ್ರದರ್ಶಿಸಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ಅಧಿಕಾರ, ಕುರ್ಚಿ ಕಿತ್ತಾಟದಲ್ಲೇ ಕಾಲ ಕಳೆದಿದೆ. ಪರಿಣಾಮ ಆಡಳಿತಯಂತ್ರ ಸಂಪೂರ್ಣ ಸ್ತಬ್ಧಗೊಂಡಂತಿದ್ದು, ಶಿಕ್ಷಣ ಕ್ಷೇತ್ರದ ಮೇಲೂ ನೇರ ದುಷ್ಪರಿಣಾಮ ಬೀರಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.ಒಂದೆಡೆ ಸರ್ಕಾರಿ ಶಾಲೆಗಳು ಮೂಲ ಸೌಕರ್ಯಗಳಿಲ್ಲದೆ ಸೊರಗುತ್ತಿದ್ದರೆ, ಮತ್ತೊಂದೆಡೆ ಕರ್ನಾಟಕ ?ಡ್ರಗ್ಸ್ ಹಬ್' ಆಗಿ ಮಾರ್ಪಡುತ್ತಿರುವುದು ತೀವ್ರ ಆತಂಕಕಾರಿ ಬೆಳವಣಿಗೆ. ಅಮಾಯಕ ಯುವ ಪೀಳಿಗೆ ಇಂದು ದಾರಿ ತಪ್ಪುತ್ತಿದ್ದು, ಡ್ರಗ್ಸ್ ಜಾಲ ಹಾಗೂ ಸಮಾಜವಿರೋಧಿ ಚಟುವಟಿಕೆಯತ್ತ ಮುಖ ಮಾಡುತ್ತಿದ್ದಾರೆ. ಸಮಾಜದ, ವಿದ್ಯಾರ್ಥಿಗಳ ಹಿತ ಕಾಪಾಡಬೇಕಿದ್ದ ಸರ್ಕಾರ ಅದನ್ನೆಲ್ಲ ಮರೆತು ಒಳಜಗಳ, ಕುರ್ಚಿ ಕಿತ್ತಾಟ ಮತ್ತು ಅಧಿಕಾರದ ಅಮಲಿನಲ್ಲಿ ಮುಳುಗಿದೆ ಎಂದು ಪ್ರಲ್ಹಾದ ಜೋಶಿ ಹರಿ ಹಾಯ್ದಿದ್ದಾರೆ.



### ಮೂರು ವರ್ಷದಲ್ಲಿ ಸರ್ಕಾರಿ ಶಾಲೆ ತೊರೆದ 2.12 ಲಕ್ಷ ಮಕ್ಕಳು

**ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಪ್ರಸ್ತುತ ಮಕ್ಕಳ ದಾಖಲಾತಿ ಭಾರಿ1 ಕುಸಿದಿದೆ. ಯುಡಿಐಎಸ್‌ಇ+ ವರದಿಯೇ ಇದನ್ನು ಬಹಿರಂಗಪಡಿಸಿದ್ದು, ಪ್ರತಿವರ್ಷ ಮಕ್ಕಳ ಸಂಖ್ಯೆ ಗಣನೀಯವಾಗಿ ಕ್ಷೀಣಿಸುತ್ತಲೇ ಇದೆ. ಕಳೆದ 3 ವರ್ಷದಲ್ಲಿ 2.12 ಲಕ್ಷ ಮಕ್ಕಳು ಶಾಲೆ ತೊರೆದಿರುವುದು ಕಾಂಗ್ರೆಸ್ ಸರ್ಕಾರದ ನಿಷ್ಕ್ರಿಯತೆಗೆ ಕೈಗನ್ನಡಿಯಾಗಿದೆ. ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಬದಲು ಮುಚ್ಚುವಂಥ ಸ್ಥಿತಿಗೆ ತಂದಿರುವುದೇ ಈ ಸರ್ಕಾರದ ಮಹತ್ಸಾಧನೆ. 2023–24ರಲ್ಲಿ ಸರ್ಕಾರಿ ಶಾಲೆಗಳ ದಾಖಲಾತಿ 1,19,26,303 ಇದ್ದರೆ, 2024–25ರಲ್ಲಿ ಅದು 1,17,80,251ಕ್ಕೆ ಇಳಿದು 1,46,052 ವಿದ್ಯಾರ್ಥಿಗಳ ಕುಸಿತ ದಾಖಲಾಗಿದೆ. 2025–26ರಲ್ಲಿ ಮತ್ತಷ್ಟು 66,037 ವಿದ್ಯಾರ್ಥಿಗಳು ಕಡಿಮೆಯಾಗಿದ್ದು, ಒಟ್ಟು ದಾಖಲಾತಿ 1,17,14,214ಕ್ಕೆ ತಲುಪಿದೆ. ಶಾಲೆಗಳ ಸಬಲೀಕರಣ ಮಾಡಬೇಕಾದ ಸರ್ಕಾರ, ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಜೋಶಿ ಹೇಳಿದ್ದಾರೆ.**

# ಲೋಕಸಭೆಗೆ 2029ರಿಂದಲೇ "ಒಂದು ರಾಷ್ಟ್ರ - ಒಂದು ಚುನಾವಣೆ" ಜಾರಿಗೆ ತರಲು ಸಾಧ್ಯ

**ಪಣಜಿ, ಜು.10:** 2029ರ ಲೋಕಸಭೆ ಚುನಾವಣೆಯಿಂದಲೇ 'ಒಂದು ರಾಷ್ಟ್ರ – ಒಂದು ಚುನಾವಣೆ' ಜಾರಿಗೆ ತರಬಹುದು ಎಂದು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಧ್ಯಕ್ಷ ಪಿ.ಪಿ. ಚೌಧರಿ ಶುಕ್ರವಾರ ಮಾಹಿತಿ ನೀಡಿದ್ದಾರೆ.

ಗೋವಾದಲ್ಲಿ ನಡೆದ ಜೆಪಿಸಿಯ ಎರಡು ದಿನಗಳ ಸಭೆಯ ನಂತರ ಮಾಧ್ಯಮದವರ ಜತೆ ಮಾತನಾಡಿದ ಅವರು, 2029ರ ಲೋಕಸಭೆ ಚುನಾವಣೆಯಿಂದಲೇ ಈ ಸುಧಾರಣೆಯನ್ನು ಜಾರಿಗೆ ತರುವಂತಹ ಕಾರ್ಯವಿಧಾನ ರೂಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಪ್ರಸ್ತಾವಿತ ಚುನಾವಣಾ ಸುಧಾರಣೆಗೆ ವ್ಯಾಪಕ ಒಮ್ಮತ ಮೂಡಿಸುವ ಉದ್ದೇಶದಿಂದ ದೇಶದಾದ್ಯಂತ ವಿವಿಧ ವಲಯಗಳ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಗೋವಾ ಸಿಎಂ ಪ್ರಮೋದ್ ಸಾವಂತ್ ಹಾಗೂ ಸಚಿವ ಸಂಪುಟದ ಸದಸ್ಯರೊಂದಿಗೆ ಶುಕ್ರವಾರ ಸಭೆ ನಡೆಸಿದ ಸಮಿತಿ ಏಕಕಾಲದಲ್ಲಿ ಚುನಾವಣೆ ಜಾರಿಗೊಳಿಸುವ ಸಂದರ್ಭದಲ್ಲಿ ಎದುರಾಗಬಹುದಾದ ಸವಾಲುಗಳು ಮತ್ತು ಅವುಗಳನ್ನು ನಿವಾರಿಸುವ ಮಾರ್ಗಗಳ ಕುರಿತು ಅಭಿಪ್ರಾಯ ಸಂಗ್ರಹಿಸಿತು.

ಗೋವಾ ಸಿಎಂ ಜತೆ ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದೇವೆ. 'ಒಂದು ರಾಷ್ಟ್ರ – ಒಂದು ಚುನಾವಣೆ'ಯನ್ನು ಹೇಗೆ ಜಾರಿಗೊಳಿಸಬಹುದು, ಯಾವ ಸವಾಲುಗಳಿವೆ ಹಾಗೂ ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಅವುಗಳನ್ನು ಹೇಗೆ ನಿವಾರಿಸಬಹುದು ಎಂಬ ಕುರಿತು ಸಮಾಲೋಚನೆ ನಡೆಸಲಾಗಿದೆ ಎಂದು ಚೌಧರಿ ಹೇಳಿದರು.

### ವಿವಿಧ ವಲಯಗಳ ಪಾಲುದಾರರೊಂದಿಗೆ ಚರ್ಚೆ: ಜೆಪಿಸಿ ಅಧ್ಯಕ್ಷ ಪಿ.ಪಿ. ಚೌಧರಿ



ರಾಜಸ್ಥಾನದ ಪಾಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದರಾಗಿರುವ ಚೌಧರಿ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್, ಹರಿಯಾಣ ಹಾಗೂ ದೆಹಲಿಯಲ್ಲಿಯೂ ಸಂವಿಧಾನ ತಜ್ಞರು, ನಾಗರಿಕ ಸಮಾಜದ ಸಂಘಟನೆಗಳು, ಶಿಕ್ಷಣ ತಜ್ಞರು ಹಾಗೂ ಇತರ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದು ತಿಳಿಸಿದರು.

ಇದುವರೆಗೆ ಸಮಾಲೋಚನೆ ನಡೆಸಿದ ನಾಗರಿಕ ಸಮಾಜ ಹಾಗೂ ವಿವಿಧ ಸಂಘಟನೆಗಳ ಶೇ.99ರಷ್ಟು ಪ್ರತಿನಿಧಿಗಳು ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಈಗ ಎಲ್ಲ ರಾಜಕೀಯ ಪಕ್ಷಗಳಿಗೂ ಒಪ್ಪಿಗೆಯಾಗುವಂತಹ ಕಾರ್ಯವಿಧಾನ ರೂಪಿಸುವುದು ನಮ್ಮ ಪ್ರಯತ್ನವಾಗಿದೆ ಎಂದರು.

**2029ರಲ್ಲೇ ಜಾರಿ ಸಾಧ್ಯತೆ:** ಜಾರಿಗೆ ಸಂಬಂಧಿಸಿದ ವೇಳಾಪಟ್ಟಿಯ ಕುರಿತು ಮಾತನಾಡಿದ ಚೌಧರಿ, ವಿವಿಧ ಆಯ್ಕೆಗಳನ್ನು ಸಮಿತಿಯು ಪರಿಶೀಲಿಸುತ್ತಿದ್ದು, 2029ರ ಲೋಕಸಭೆ ಚುನಾವಣೆಯ ವೇಳೆಗೆ ಈ ಸುಧಾರಣೆ ಜಾರಿಯಾಗುವ ಸಾಧ್ಯತೆ ಇದೆ ಎಂದು ಸೂಚಿಸಿದರು. ಅದಕ್ಕೂ ಮುನ್ನ, ಕೆಲವು ರಾಜ್ಯಗಳ ರಾಜಕೀಯ ಪಕ್ಷಗಳು ಹಾಗೂ ಮುಖ್ಯಮಂತ್ರಿಗಳು ಸ್ವಯಂಪ್ರೇರಿತವಾಗಿ ತಮ್ಮ ಚುನಾವಣಾ ಕಾಲವನ್ನು ಹೊಂದಾಣಿಕೆ ಮಾಡಿಕೊಳ್ಳಲು ಒಪ್ಪಿದರೆ, ಆ ರಾಜ್ಯಗಳಲ್ಲಿ ಮೊದಲ ಹಂತದಲ್ಲೇ ಏಕಕಾಲದಲ್ಲಿ ಚುನಾವಣೆ ನಡೆಸುವ ಸಾಧ್ಯತೆಯೂ ಇದೆ ಎಂದು ಹೇಳಿದರು.

**ಆಡಳಿತ ಯಂತ್ರದ ಮೇಲೆ ಪರಿಣಾಮ**

ಆಗಾಗ ನಡೆಯುವ ಚುನಾವಣೆಗಳು ಆಡಳಿತ ವ್ಯವಸ್ಥೆಗೂ ಅಡ್ಡಿಯಾಗುತ್ತವೆ ಮತ್ತು ಶಿಕ್ಷಣ ಕ್ಷೇತ್ರದ ಮೇಲೂ ಪರಿಣಾಮ ಬೀರುತ್ತವೆ ಎಂದು ಚೌಧರಿ ಅಭಿಪ್ರಾಯಪಟ್ಟರು. ಮತದಾರರ ಪಟ್ಟಿ ಸಿದ್ಧಪಡಿಸುವುದು, ತರಬೇತಿ ಮತ್ತು ಮತದಾನ ಕರ್ತವ್ಯ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ಕೆಲಸಗಳಿಗೆ ಸರ್ಕಾರಿ ಶಾಲಾ ಶಿಕ್ಷಕರನ್ನು ನಿಯೋಜಿಸಲಾಗುತ್ತದೆ. ಇದರಿಂದ ಸರ್ಕಾರಿ ಶಾಲೆಗಳ ಬೋಧನಾ ಚಟುವಟಿಕೆಗೆ ಧಕ್ಕೆಯಾಗುತ್ತದೆ ಎಂದು ಅವರು ಹೇಳಿದರು.

"ಇದರ ಪರಿಣಾಮವಾಗಿ ಸರ್ಕಾರಿ ಶಾಲೆಗಳಲ್ಲಿನ ಬೋಧನಾ ಕಾರ್ಯಕ್ಕೆ ತೊಂದರೆಯಾಗುತ್ತದೆ. ವಿಶೇಷವಾಗಿ ಸರ್ಕಾರಿ ಶಾಲೆಗಳನ್ನೇ ಅವಲಂಬಿಸಿರುವ ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳಿಗೆ ಹೆಚ್ಚು ನಷ್ಟವಾಗುತ್ತದೆ. ಮುಂದಿನ ಹಲವು ದಶಕಗಳವರೆಗೆ ಇದೇ ಪರಿಸ್ಥಿತಿ ಮುಂದುವರಿದರೆ ಅದು ಗಂಭೀರ ಸಮಸ್ಯೆಯಾಗಲಿದೆ" ಎಂದು ಅವರು ಎಚ್ಚರಿಕೆ ನೀಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪರಿಕಲ್ಪನೆಯ 'ಒಂದು ರಾಷ್ಟ್ರ–ಒಂದು ಚುನಾವಣೆ' ದೇಶದ ಪ್ರಮುಖ ಚುನಾವಣಾ ಸುಧಾರಣೆಯಾಗಿದ್ದು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವ ಗುರಿ ಸಾಧಿಸಲು ಇದು ನೆರವಾಗಲಿದೆ ಎಂದು ಚೌಧರಿ ಹೇಳಿದರು. "ಈ ಕುರಿತು ಹೆಚ್ಚಿನ ವಿವರಗಳು ಕಾಲಕ್ರಮೇಣ ಸ್ಪಷ್ಟವಾಗಲಿವೆ. ಎಲ್ಲರಿಗೂ ಒಪ್ಪಿಗೆಯಾಗುವಂತಹ ಪ್ರಾಯೋಗಿಕ ಕಾರ್ಯವಿಧಾನ ರೂಪಿಸಿ, ವ್ಯಾಪಕ ಒಮ್ಮತ ನಿರ್ಮಿಸುವುದೇ ನಮ್ಮ ಉದ್ದೇಶ" ಎಂದು ಚೌಧರಿ ಹೇಳಿದರು.

### ತಪ್ಪಲಿದೆ 7 ಲಕ್ಷ ಕೋಟಿ ರೂಪಾಯಿ ಆರ್ಥಿಕ ಹೊರೆ

ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಆಗುವ ಆರ್ಥಿಕ ಪ್ರಯೋಜನಗಳನ್ನು ಉಲ್ಲೇಖಿಸಿದ ಚೌಧರಿ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಗೆ ಸಲ್ಲಿಸಲಾದ ಅಧ್ಯಯನ ವರದಿಯನ್ನು ಉಲ್ಲೇಖಿಸಿದರು. ದೇಶದಾದ್ಯಂತ ಪ್ರತ್ಯೇಕವಾಗಿ ಚುನಾವಣೆ ನಡೆಸುವುದರಿಂದ 7 ಲಕ್ಷ ಕೋಟಿ ಆರ್ಥಿಕ ನಷ್ಟ ಉಂಟಾಗುತ್ತದೆ. ಆದರೆ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಅಷ್ಟೇ ಪ್ರಮಾಣದ ಆರ್ಥಿಕ ಲಾಭವಾಗಲಿದೆ ಎಂದು ಅಧ್ಯಯನದಲ್ಲಿ ಅಂದಾಜಿಸಲಾಗಿದೆ ಎಂದು ಹೇಳಿದರು. "ಇಂದಿನ ಆರ್ಥಿಕತೆ ಜಾಗತೀಕರಣಗೊಂಡಿದೆ. ಒಂದು ರಾಜ್ಯದಲ್ಲಿ ಉಂಟಾಗುವ ಪ್ರತಿಕೂಲ ಪರಿಣಾಮ ಇತರ ರಾಜ್ಯಗಳ ಮೇಲೂ ಬೀಳುತ್ತದೆ. ಆಗಾಗ ನಡೆಯುವ ಚುನಾವಣೆಗಳು ರಾಜ್ಯದ ಗಡಿಗಳನ್ನು ಮೀರಿ ಆರ್ಥಿಕ ಪರಿಣಾಮ ಉಂಟುಮಾಡುತ್ತವೆ," ಎಂದು ಅವರು ಹೇಳಿದರು.

# ರಾಮಮಂದಿರ ದೇಣಿಗೆ ದುರ್ಬಳಕೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ

## ೩೦ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ ಉತ್ತರ ಪ್ರದೇಶ ಪೊಲೀಸರು



**ಅಯೋಧ್ಯಾ, ಜು.10:** ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ದೇವಸ್ಥಾನಕ್ಕೆ ಭಕ್ತರು ನೀಡಿದ ದೇಣಿಗೆಯ ಹಣವನ್ನು ದುರ್ಬಳಕೆ ಮಾಡಿ ಅದರ ಒಂದು ಭಾಗವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಪೊಲೀಸರು ಆರೋಪಿಗಳ ಹಣಕಾಸು ವ್ಯವಹಾರಗಳನ್ನು ಪತ್ತೆಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದು, ಇದುವರೆಗೆ 30 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ್ದಾರೆ.

ತನಿಖೆಯ ಪ್ರಕಾರ, ದೇವಸ್ಥಾನದ ದೇಣಿಗೆ ಸಂಗ್ರಹದಲ್ಲಿ ನಡೆದ ಅಕ್ರಮದ ಮೂಲಕ ಪಡೆದ ಹಣವನ್ನು ಆರೋಪಿಗಳು ವಿವಿಧ ಖಾತೆಗಳ ಮೂಲಕ ವರ್ಗಾಯಿಸಿದ್ದು, ಅದರ ಒಂದು ಭಾಗವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬ್ಯಾಂಕ್ ಖಾತೆಗಳ ವಹಿವಾಟಿನ ಸಂಪೂರ್ಣ ವಿವರಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಆರೋಪಿಗಳ ಮನೆಗಳಲ್ಲಿ ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ನಗದು, ಚಿನ್ನಾಭರಣ ಹಾಗೂ ಒಂದು ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಜೊತೆಗೆ, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು, ಬ್ಯಾಂಕ್ ವ್ಯವಹಾರಗಳ ಮಾಹಿತಿ ಮತ್ತು ಹೂಡಿಕೆ ದಾಖಲೆಗಳನ್ನು ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ. ಈ ಹಿಂದೆ ಬಂಧಿತನಾಗಿರುವ ಪ್ರಮುಖ ಆರೋಪಿ ವಿಚಾರಣೆ ವೇಳೆ ದೇವಸ್ಥಾನದ ಹಣದಿಂದ ಮದುವೆ ವೆಚ್ಚ, ಕಾರು ಖರೀದಿ ಸೇರಿದಂತೆ ಸುಮಾರು 19 ಲಕ್ಷ ರೂ.ಗಳನ್ನು ವೈಯಕ್ತಿಕ ಉದ್ದೇಶಗಳಿಗೆ ಖರ್ಚು ಮಾಡಿರುವುದಾಗಿ ತಿಳಿಸಿದ್ದಾನೆ ಎಂದು ತನಿಖಾ ಮೂಲಗಳು ತಿಳಿಸಿವೆ. ಹಣದ ಜಾಡು ಪತ್ತೆಹಚ್ಚಲು ಸಂಬಂಧಿಕರು ಮತ್ತು ಆಪ್ತರ ಖಾತೆಗಳನ್ನೂ ಪೊಲೀಸರು ಪರಿಶೀಲಿಸುತ್ತಿದ್ದು, ಅಕ್ರಮವಾಗಿ ವರ್ಗಾಯಿಸಲಾದ ಸಂಪೂರ್ಣ ಮೊತ್ತವನ್ನು ಪತ್ತೆಹಚ್ಚಲು ಹಣಕಾಸು ತಜ್ಞರ ನೆರವು ಪಡೆಯಲಾಗಿದೆ. ಪ್ರಕರಣದಲ್ಲಿ ಇನ್ನೂ ಕೆಲವರ ಪಾತ್ರ ಇರುವ ಶಂಕೆ ವ್ಯಕ್ತವಾಗಿದ್ದು, ತನಿಖೆಯನ್ನು ಮತ್ತಷ್ಟು ವಿಸ್ತರಿಸಲಾಗಿದೆ.

## ಕಾಲ್ತುಳಿತ ಪ್ರಕರಣ ನನ್ನ ಜೀವನದ ಅತ್ಯಂತ ನೋವಿನ ಕ್ಷಣ: ಸಿಎಂ ವಿಜಯ್

# ಕರೂರು ದುರಂತ: ಸಂತ್ರಸ್ತರ ನೆನಪಿಗೆ ಸ್ಮಾರಕ ನಿರ್ಮಾಣ



**ಚೆನ್ನೈ, ಜು.10:** ಕರೂರು ಕಾಲ್ತುಳಿತ ದುರಂತದ ಸಂತ್ರಸ್ತರ ಸ್ಮರಣಾರ್ಥ ಸ್ಮಾರಕ ನಿರ್ಮಾಣ ಮಾಡಲಾಗುವುದು. ರಾಜಕೀಯದಿಂದಾಗಿ ಮುಂದೆಂದೂ ಇಂತಹ ಘಟನೆಗಳು ನಡೆಯಬಾರದು ಎಂದು ತಮಿಳುನಾಡು ಮುಖ್ಯಮಂತ್ರಿ ಸಿ. ವಿಜಯ್ ಜೋಸೆಫ್ ಹೇಳಿದ್ದಾರೆ.

2025ರ ಸೆಪ್ಟೆಂಬರ್‌ನಲ್ಲಿ ವಿಜಯ್ ಬಹಿರಂಗ ಸಭೆ ವೇಳೆ ಕರೂರಿನಲ್ಲಿ ಕಾಲ್ತುಳಿತ ಸಂಭವಿಸಿದ್ದು 41 ಮಂದಿ ಮೃತಪಟ್ಟಿದ್ದರು. ಮೃತಪಟ್ಟವರ ಕುಟುಂಬ ಸದಸ್ಯರಿಗೆ ಉದ್ಯೋಗ ನೇಮಕಾತಿ ಪತ್ರಗಳನ್ನು ವಿತರಿಸಲು ತಮಿಳುನಾಡು ಸರ್ಕಾರಕ್ಕೆ ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠವು ಶುಕ್ರವಾರ ಷರತ್ತುಬದ್ಧ ಅನುಮತಿ ನೀಡಿದೆ.

ತಮಿಳಗ ವೆಟ್ರಿ ಕಳಗಂ (ಟಿವಿಕೆ) ನೇತೃತ್ವದ ರಾಜ್ಯ ಸರ್ಕಾರವು ಕರೂರಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲು ಕೋರ್ಟ್ ಹಸಿರು ನಿಶಾನೆ ತೋರಿದ್ದು, ವಿಜಯ್ ಕರೂರಿನಲ್ಲಿ ಕಾರ್ಯಕ್ರಮ ನಡೆಸಿದ್ದಾರೆ. ಇನ್ನು ಆದೇಶ ಪತ್ರವು ತಾತ್ಕಾಲಿಕವಾಗಿರಲಿದ್ದು, ನ್ಯಾಯಾಂಗ ಪರಿಶೀಲನೆಗೆ ಒಳಪಟ್ಟಿರುತ್ತದೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ದುರಂತದ ನಂತರ ಜಿಲ್ಲೆಗೆ ಮೊದಲ ಬಾರಿಗೆ ಭೇಟಿ ನೀಡಿದ ಸಿಎಂ ವಿಜಯ್, ರ್‍ಯಾಲಿ ನಡೆದ ದಿನದಂದು ಪೊಲೀಸರು ತಮ್ಮನ್ನು ದಿಕ್ಕುತಪ್ಪಿಸಿದ್ದರು. ಕಾರ್ಯಕ್ರಮವನ್ನು ಮುಂದುವರಿಸುವ ವಿಚಾರದಲ್ಲಿ ನಾವು ಪೊಲೀಸರನ್ನು ನಂಬಿದೆವು. ಈ ಕಾಲ್ತುಳಿತವು ನನ್ನ ಜೀವನದ ಅತ್ಯಂತ ನೋವಿನ ಕ್ಷಣ. ಇದು ನನ್ನನ್ನು ಇಂದಿಗೂ ಕಾಡುತ್ತಿದೆ ಎಂದು ಹೇಳಿದರು.

ಇನ್ನು ಒಬ್ಬ ವ್ಯಕ್ತಿ ಎಷ್ಟೇ ಯಶಸ್ಸನ್ನು ಕಂಡರೂ, ಜೀವನದಲ್ಲಿ ಇಂತಹ ಘಟನೆಗಳು ಎದುರಾಗುತ್ತವೆ. ನಾನು ಕರೂರು ಪ್ರವೇಶಿಸಿದಾಗ ಅವರು (ಪೊಲೀಸರು) ನನ್ನನ್ನು ತಡೆಯಬಹುದಿತ್ತಲ್ಲವೇ ಎಂದು ಜನರನ್ನು ಪ್ರಶ್ನಿಸಿದರು. ಹಾಗೆಯೇ, ಸಭೆಯನ್ನು ರದ್ದುಗೊಳಿಸುವ ಸಂಪೂರ್ಣ ಹಕ್ಕು ಅವರಿಗಿತ್ತು. ಆದರೆ ಅವರು ರದ್ದುಗೊಳಿಸಲಿಲ್ಲ, ಬದಲಿಗೆ ಅವರೇ ನನ್ನನ್ನು ಮುನ್ನಡೆಸಿಕೊಂಡು ಹೋದರು ಎಂದು ದೂರಿದರು. ಇದಕ್ಕೆ ನಿಜವಾಗಿಯೂ ಯಾರು ಜವಾಬ್ದಾರರು. ಇದನ್ನು ಸಂಚು ರೂಪಿಸಿ ಮಾಡಿದ್ದು ಯಾರು ಎಂದು ಪ್ರಶ್ನಿಸಿದ ವಿಜಯ್, ಪೊಲೀಸರ ಮೇಲಿನ ಟೀಕೆಯನ್ನು ಅಂದು ಅಧಿಕಾರದಲ್ಲಿದ್ದ ಡಿಎಂಕೆ ಕಡೆಗೆ ತಿರುವಿದರು. ಕಾಲ್ತುಳಿತದ ತಕ್ಷಣದ ನಂತರ ತಾವು ಮೌನವಾಗಿದ್ದರ ಕುರಿತು ಕೇಳಿಬಂದ ಟೀಕೆಗಳಿಗೂ ತಿರುಗೇಟು ನೀಡಿದರು.

ನಾನು ಮನೆಯಲ್ಲಿ ತೀವ್ರ ನೋವು ಮತ್ತು ನಿರಾಶೆಯಿಂದ ನಲುಗುತ್ತಿದ್ದಾಗ, ನೀವು ನನ್ನನ್ನು ನೋಡಿ ಅಪಹಾಸ್ಯ ಮಾಡಿದಿರಿ. ನಾನು ಅಡಗಿಕೊಂಡಿದ್ದೇನೆ ಎಂದು ಹೇಳಿದಿರಿ. ನಮ್ಮ ರಾಜಕೀಯ ವಿರೋಧಿಗಳು ಮತ್ತು ಪೊಲೀಸರು ಸೇರಿ ಈ ಕಾಲ್ತುಳಿತವನ್ನು ಪ್ರೇರೇಪಿಸಲು ಸಂಚು ರೂಪಿಸಿದ್ದರು ಎಂದು ದೂರಿದರು.

ಪೊಲೀಸರು ಅಲ್ಲಿ ಸಾಕಷ್ಟು ಸಿಬ್ಬಂದಿಯನ್ನು ನಿಯೋಜಿಸಿದ್ದರೇ. ಅವರು ನಾಚಿಕೆಯಿಲ್ಲದೆ ನನ್ನನ್ನು ದೂಷಿಸಿದರು. ಎಂ.ಕೆ. ಸ್ಟಾಲಿನ್ ಅವರು ವಿಧಾನಸಭೆಯಲ್ಲಿ ಇದರ ಬಗ್ಗೆ ರಾಜಕೀಯ ಮಾಡಿದರು. ಪಕ್ಷದ ಯಶಸ್ವಿ ಚುನಾವಣಾ ಪ್ರಚಾರವನ್ನು ಹಳಿ ತಪ್ಪಿಸುವ ಪ್ರಯತ್ನವಾಗಿ ಈ ದುರಂತವನ್ನು ವ್ಯವಸ್ಥಿತವಾಗಿ ಸೃಷ್ಟಿಸಲಾಗಿದೆ ಎಂದು ಟಿವಿಕೆ ವಾದವನ್ನು ಪುನರುಚ್ಚರಿಸಿದರು.

# ಟಿಎಂಸಿ ಖಾತೆಗಳ ರೀತಿ ದೇಗುಲ ನಿಧಿ ಜಪ್ತಿ ಯಾವಾಗ: ಸಂಸದ ಓಬ್ರಿಯನ್

**ನವದೆಹಲಿ, ಜು.10:** ತೃಣಮೂಲ ಕಾಂಗ್ರೆಸ್‌ನ ಮೂರು ಬ್ಯಾಂಕ್ ಖಾತೆಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿರುವುದನ್ನು ಪ್ರಶ್ನಿಸಿರುವ ಟಿಎಂಸಿ ಪಶ್ಚಿಮ ಬಂಗಾಳ ರಾಜ್ಯಸಭಾ ನಾಯಕ ಡೆರೆಕ್ ಓಬ್ರಿಯನ್, ಕೇಂದ್ರ ತನಿಖಾ ಸಂಸ್ಥೆಯ ವಿರುದ್ಧ ಹರಿಹಾಯ್ದಿದ್ದಾರೆ. ಅಯೋಧ್ಯೆಯ ರಾಮಮಂದಿರದ ದೇಣಿಗೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರವನ್ನು ಪರೋಕ್ಷವಾಗಿ ಉಲ್ಲೇಖಿಸಿರುವ ಅವರು, ಈ ಪ್ರಕರಣದಲ್ಲಿ ಇ.ಡಿ. ಯಾವಾಗ ದೇವಾಲಯದ ನಿಧಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ ಎಂದು ಲೇವಡಿ ಮಾಡಿದ್ದಾರೆ.ಟಿಎಂಸಿಯ ರಾಷ್ಟ್ರೀಯ ಜಂಟಿ ಕಾರ್ಯದರ್ಶಿಯೂ ಆಗಿರುವ ಡೆರೆಕ್ ಓಬ್ರಿಯನ್, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಇಡಿ ಟಿಎಂಸಿಯ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮೂರು ಖಾತೆಗಳನ್ನು ಜಪ್ತಿ ಮಾಡಿದೆ. ಇಡಿ ಯಾವಾಗ ದೇವಾಲಯದ ನಿಧಿಯನ್ನು ಜಪ್ತಿ ಮಾಡುತ್ತದೆ ಎಂದು ಹೇಳಿಕೆ ಹಾಕಿದ್ದಾರೆ. ರಾಮಮಂದಿರದ ದೇಣಿಗೆ ನಿರ್ವಹಣಾ ವ್ಯವಸ್ಥೆಯಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸುತ್ತಿರುವ ಬೆನ್ನಲ್ಲೇ ಈ ಹೇಳಿಕೆ ಹೊರಬಿದ್ದಿದೆ. ನಿಧಿ ದುರುಪಯೋಗಕ್ಕೆ ಸಂಬಂಧಿಸಿದ ಪ್ರಕರಣವೊಂದರ ತನಿಖೆಯ ಅಂಗವಾಗಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ತೃಣಮೂಲ ಕಾಂಗ್ರೆಸ್‌ಗೆ ಸೇರಿದ 440 ಕೋಟಿ ರೂ.ಗೂ ಹೆಚ್ಚು ಮೊತ್ತದ ಮೂರು ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿತ್ತು. ಈ ಕುರಿತು ಹೇಳಿಕೆ ನೀಡಿರುವ ಇಡಿ, ಪಿಎಂಎಲ್‌ಎ ಕಾಯ್ದೆಯ ಅಡಿಯಲ್ಲಿ ಈ ಆದೇಶಗಳನ್ನು ಹೊರಡಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ. ಆಸ್ತಿಯನ್ನು ವಶಕ್ಕೆ ಪಡೆಯುವುದು ಪ್ರಾಯೋಗಿಕವಾಗಿ ಸಾಧ್ಯವಾಗದಿದ್ದಾಗ ಮತ್ತು ಆ ಆಸ್ತಿಯನ್ನು ವರ್ಗಾಯಿಸದಂತೆ ಅಥವಾ ಯಾವುದೇ ರೀತಿಯಲ್ಲಿ ದುರ್ಬಳಕೆ ಮಾಡದಂತೆ ತಡೆಯಲು ಈ ಕಾನೂನು ಅಧಿಕಾರ ನೀಡುತ್ತದೆ ಎಂದು ಸಂಸ್ಥೆ ತಿಳಿಸಿದೆ.

# ಕಾಂಗ್ರೆಸ್ ಅವಧಿಯಲ್ಲೇ ಆಸ್ಟ್ರೇಲಿಯಾ ಜತೆ ಯುರೇನಿಯಂ ಒಪ್ಪಂದ: ಜೈರಾಮ್ ರಮೇಶ್

**ನವದೆಹಲಿ, ಜು.10:** ಭಾರತ ಪರಮಾಣು ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣಲು, ಅಸ್ಟ್ರೇಲಿಯಾವು ಯುರೇನಿಯಂ ಅನ್ನು ರಫ್ತು ಮಾಡಲು ಒಪ್ಪಿಕೊಂಡಿದ್ದು, ಇದರ ಶ್ರೇಯಸ್ಸು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಶುಕ್ರವಾರ ಈ ಕುರಿತು ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಇದು ಮೋದಿ ಅವರ ಸಾಧನೆ ಏನಲ್ಲ, 2011ರಲ್ಲೇ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಆಸ್ಟ್ರೇಲಿಯಾ ನಮಗೆ ಯುರೇನಿಯಂ ನೀಡಿತ್ತು ಎಂದು ಹೇಳಿದ್ದಾರೆ.

ಗುರುವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ನಾಗರಿಕ ಪರಮಾಣು ಇಂಧನ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಭಾರತಕ್ಕೆ, ಆಸ್ಟ್ರೇಲಿಯಾ ಯುರೇನಿಯಂ ಅನ್ನು ನೀಡುವಂತೆ ಮಾಡಿದ್ದು ಪ್ರಧಾನಿ ಮೋದಿ ಅವರ ಸಾಧನೆ ಎಂದು ಬಿಜೆಪಿ ಐಟಿ ವಿಂಗ್ ಸೋಷಿಯಲ್ ಮೀಡಿಯಾಗಳಲ್ಲಿ ಹಂಚಿಕೊಂಡಿತ್ತು.

ಇದನ್ನು ವಿರೋಧಿಸಿರುವ ಜೈರಾಮ್ ರಮೇಶ್, ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಪರಮಾಣು ಒಪ್ಪಂದವು 2008 ರಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರವಿದ್ದಾಗಲೇ ಮಾತುಕತೆ ಆರಂಭವಾಗಿದ್ದು, 2011 ರಲ್ಲಿ ಆಸ್ಟ್ರೇಲಿಯಾ ಯುರೇನಿಯಂ ರಫ್ತು ಮಾಡಿತ್ತು ಎಂದು ಹೇಳಿದ್ದಾರೆ. ಇದನ್ನು ಮೋದಿ ಅವರ ಸಾಧನೆ ಎಂದು ಕರೆಯಲು ಸಾಧ್ಯವಿಲ್ಲ. ಈ ಒಪ್ಪಂದವು ಕಾಂಗ್ರೆಸ್ ಆಡಳಿತದ ಅವಧಿಯಲ್ಲಿಯೇ ನಡೆದಿದ್ದು, ಪ್ರಧಾನಿಗಳು ಎಲ್ಲಾ ಯೋಜನೆಗಳ ಕೀರ್ತಿ ತಮಗೆ ಸಲ್ಲಬೇಕೆಂದು ವರ್ತಿಸುವುದು ಇಲ್ಲಿ ಸ್ಪಷ್ಟವಾಗಿದೆ ಎಂದು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

# ದಲಿತರು ಬೀದಿಗಿಳಿಯಬೇಡಿ, ಕಾನೂನು ಹೋರಾಟ ನಡೆಸಿ: ಮಾಯಾವತಿ



**ಲಖನೌ,ಜು.10:** ದಲಿತರು ಮತ್ತು ಇತರ ಅಂಚಿನಲ್ಲಿರುವ ವರ್ಗಗಳು ಅನ್ಯಾಯದ ವಿರುದ್ಧ ಸಾಂವಿಧಾನಿಕ ಮಾರ್ಗದ ಮೂಲಕ ಕಾನೂನು ಹೋರಾಟ ನಡೆಸಬೇಕು, ಬೀದಿಗಿಳಿಯುವುದನ್ನು ತಡೆಯಬೇಕು ಎಂದು ಬಿಎಸ್‌ಪಿ ಮುಖ್ಯಸ್ಥೆ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮಾಯಾವತಿ ಒತ್ತಾಯಿಸಿದ್ದಾರೆ. ಹಾಗೆಯೇ ಮತದಾನದ ಮೂಲಕ ರಾಜಕೀಯ ಸಬಲೀಕರಣವು ದಲಿತರ ಹಕ್ಕುಗಳನ್ನು ಪಡೆಯುವ ಕೀಲಿಯಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಮೇರಠ್, ಸಹರಾಣಪುರ, ಹಾರ್ದೋಯ್ ಮತ್ತು ಪ್ರಯಾಗ್‌ರಾಜ್‌ನಂತಹ ಜಿಲ್ಲೆಗಳಲ್ಲಿ ದಲಿತರು ಕಾನೂನು ಮತ್ತು ಸುವ್ಯವಸ್ಥೆ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಮೇರಠ್‌ನಲ್ಲಿ ದಲಿತ ಮಹಿಳೆಯ ಹತ್ಯೆಯನ್ನು ಖಂಡಿಸಿ ಗುರುವಾರ ಪ್ರತಿಭಟನೆ ಹಿಂಸಾತ್ಮಕ ತಿರುವು ಪಡೆದುಕೊಂಡಿದೆ. ಘಟನೆಯಲ್ಲಿ ಹನ್ನೊಂದು ಪೊಲೀಸರು ಗಾಯಗೊಂಡಿದ್ದಾರೆ.

ಈ ಸಂಬಂಧ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಯಾವತಿ, ಡಾ.ಬಿ.ಆರ್. ಅಂಬೇಡ್ಕರ್ ಜಾತಿವಾದಿ ಶಕ್ತಿಗಳ ವಿರೋಧದ ಹೊರತಾಗಿಯೂ ತಮ್ಮ ಬುದ್ಧಿವಂತಿಕೆ ಮತ್ತು ದೂರದೃಷ್ಟಿಯ ಮೂಲಕ ಈ ಸಮುದಾಯಗಳಿಗೆ ಹಲವಾರು ಸಾಂವಿಧಾನಿಕ, ಕಾನೂನು ಮತ್ತು ಮೂಲಭೂತ ಹಕ್ಕುಗಳನ್ನು ಖಾತ್ರಿಪಡಿಸಿದ್ದಾರೆ. ಈ ವರ್ಗಗಳು ತಮ್ಮ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಕಾಪಾಡಿಕೊಳ್ಳಲು ತಮ್ಮ ಮತಗಳನ್ನು ಬಳಸಬೇಕು. ಈ ಮೂಲಕ ಸರ್ಕಾರದ ಮೇಲೆ ಹಿಡಿತ ಸಾಧಿಸಿ ರಾಜಕೀಯ ಅಧಿಕಾರದ ಮಾಸ್ಟರ್ ಕೀಯನ್ನು ಪಡೆದುಕೊಳ್ಳಬೇಕು ಎಂದು ಅಂಬೇಡ್ಕರ್ ಒತ್ತಿ ಹೇಳಿದ್ದಾರೆ ಎಂದೂ ಹೇಳಿದರು.

ಅನ್ಯಾಯ, ದಬ್ಬಾಳಿಕೆ ಮತ್ತು ಜಾತಿ ತಾರತಮ್ಯದ ವಿರುದ್ಧದ ಹೋರಾಟವು ಯಾವಾಗಲೂ ಕಾನೂನಿನ ಚೌಕಟ್ಟಿನೊಳಗೆ ಇರಬೇಕು. ಕೆಳ ನ್ಯಾಯಾಲಯಗಳಲ್ಲಿ ನ್ಯಾಯ ಸಿಗದಿದ್ದರೆ, ಸುಪ್ರೀಂ ಕೋರ್ಟ್ ಸೇರಿದಂತೆ ಉನ್ನತ ನ್ಯಾಯಾಲಯಗಳಲ್ಲಿ ತಮ್ಮ ಪ್ರಕರಣಗಳನ್ನು ಮುಂದುವರಿಸಬೇಕು ಎಂಬುದು ಅಂಬೇಡ್ಕರ್ ಅಭಿಪ್ರಾಯವಾಗಿತ್ತು ಎಂದು ಮಾಯಾವತಿ ತಿಳಿಸಿದ್ದಾರೆ.

ಸಂಕುಚಿತ ರಾಜಕೀಯ ಹಿತಾಸಕ್ತಿ ಹೊಂದಿರುವ ಕೆಲವು ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ದಮನಿತ ಸಮುದಾಯದವರನ್ನು ದಾರಿ ತಪ್ಪಿಸುತ್ತವೆ. ಪ್ರತಿಭಟನೆಗೆ ಪ್ರಚೋದನೆ ನೀಡುತ್ತವೆ. ಇಂತಹ ಸಂಘಟನೆಗಳು ಮೊದಲು ಹಿಂಸಾಚಾರ, ಗಲಭೆಗಳು ಮತ್ತು ರಸ್ತೆತಡೆಗಳನ್ನು ಪ್ರಚೋದಿಸುತ್ತವೆ. ನಂತರ ನಾಯಕರು ಮೊಸಳೆ ಕಣ್ಣೀರು ಸುರಿಸಿ ಘಟನೆಗಳಿಂದ ರಾಜಕೀಯ ಲಾಭ ಪಡೆಯಲು ಪೀಡಿತ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ ಎಂದು ಮಾಯಾವತಿ ದೂರಿದರು.

# ನೋಯ್ಡಾದಲ್ಲಿ ಅಪಘಾತ ಮೂವರು ಕಾರ್ಮಿಕರ ಸಾವು

**ನವದೆಹಲಿ, ಜು.10:** ಉತ್ತರ ಪ್ರದೇಶದ ನೋಯ್ಡಾದ ಜೆವರ್ ಪ್ರದೇಶದಲ್ಲಿ ರಸ್ತೆಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಿಹಾರ ಮೂಲದ ಮೂವರು ಕಾರ್ಮಿಕರಿಗೆ ಸ್ಕಾರ್ಪಿಯೋ ಕಾರು ಡಿಕ್ಕಿ ಹೊಡೆದಿದ್ದು, ಭೀಕರ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಜೆವರ್ ಪೊಲೀಸ್ ಠಾಣೆ ವ್ಯಾಪ್ತಿಯ ಜೆವರ್–ಖುರ್ಜಾ ರಸ್ತೆಯಲ್ಲಿರುವ ನೀಮ್ಕಾ ಗ್ರಾಮದ ಬಳಿ ಬುಧವಾರ ರಾತ್ರಿ ಈ ಅಪಘಾತ ಸಂಭವಿಸಿದ್ದು, ಎಸ್ ಯುವಿ ಕಾರು ಡಿಕ್ಕಿ ಹೊಡೆಗು ಮೂವರು ಪಾದಚಾರಿಗಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಮೃತರನ್ನು ಕರಣ್(22), ವಿಶ್ವಜೀತ್ (24) ಮತ್ತು ಮಿಥುನ್ (25) ಎಂದು ಗುರುತಿಸಲಾಗಿದ್ದು, ಇವರೆಲ್ಲರೂ ಬಿಹಾರದ ಅರಾರಿಯಾ ಜಿಲ್ಲೆಯ ನಿವಾಸಿಗಳಾಗಿದ್ದು, ಭತ್ತ ನಾಟಿ ಕೆಲಸಕ್ಕಾಗಿ ಇಲ್ಲಿಗೆ ಬಂದಿದ್ದರು ಎನ್ನಲಾಗಿದೆ.

ಮೃತರ ಕುಟುಂಬ ಸದಸ್ಯರು ದೂರು ನೀಡಿದ ನಂತರ, ಚಾಲಕನ ವಿರುದ್ಧ ಪ್ರಕರಣ ದಾಖಲಿಸಿ, ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ಬಂಧಿಸಲು ತಂಡ ರಚಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಅಪಘಾತಕ್ಕೆ ಸಂಬಂಧಿಸಿದಂತೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.



ಸಂಸದ ಎನ್.ಕೆ. ಪ್ರೇಮಚಂದ್ರನ್ ಮತ್ತು ಕೇರಳ ಅರಣ್ಯ, ವನ್ಯಜೀವಿ ರಕ್ಷಣೆ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಶಿಬು ಬೇಬಿ ಜಾನ್ ಅವರು ಶುಕ್ರವಾರ ನವದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿದ್ದರು.

# ಜಾಗತಿಕ ಡಿಜಿಟಲ್ ಲೋಕದ ಸಾಧಕ ಅತುಲ್ ಹೆಗ್ಡೆ ಸ್ವರ್ಗಸ್ಥ



**ಮುಂಬಯಿ, ಜು.10:** ಡಿಜಿಟಲ್ ಯುಗದ ಅಪ್ರತಿಮ ಪ್ರತಿಭೆ,ಉದ್ಯಮಿ ಸೃಜನಶೀಲತೆಯ ಶಿಖರಕ್ಕೇರಿದ ಮಹಾನ್ ಸಾಧಕ ಅತುಲ್ ಹೆಗ್ಡೆ ಮಿಜಾರು (53) ಕಳೆದ ಮಂಗಳವಾರ (ಜು.07) ಹೃದಯಾಘಾತದಿಂದ ಮುಂಬಯಿಯ ಸ್ವನಿವಾಸದಲ್ಲಿ ಸ್ವರ್ಗಸ್ಥರಾದರು.

ಕರ್ನಾಟಕದ ಮಣ್ಣಿನಿಂದ ಬಂದು ಮುಂಬಯಿ ಕಾರ್ಯಕ್ಷೇತ್ರವಾಗಿಸಿ ಜಾಗತಿಕ ಡಿಜಿಟಲ್ ಲೋಕದಲ್ಲಿ ತಮ್ಮದೇ ಆದ ಅಸ್ಮಿತೆಯನ್ನು ರೂಪಿಸಿಕೊಂಡ ಅತುಲ್ ಹೆಗ್ಡೆ ಅವರು ಮಿಜಾರು ತೋಡಾರು ಕೇರ್ದಿಲ ಮೂಲದವರು. ಅವರೋರ್ವ ಕೇವಲ ಯಶಸ್ವಿ ಉದ್ಯಮಿಯಾಗಿರಲಿಲ್ಲ. ಬದಲಾಗಿ ಅವರು ಹೊಸ ತಲೆಮಾರಿನ ಕನಸುಗಾರರಿಗೆ ದಾರಿದೀಪವಾಗಿದ್ದ ಕಲಾತ್ಮಕ ಚಿಂತಕ. ಅತುಲ್ ಅಲ್ಪಾಯುಷಿಗಳಾದರೂ ತಮ್ಮ ಸೃಜನಶೀಲ ಕಾರ್ಯಗಳ ಮೂಲಕ ಅಜರಾಮರವಾದ ಸಾಧನೆಯನ್ನು ದಾಖಲಿಸಿದ್ದಾರೆ.

**ಉತ್ತಮ ಕೌಟುಂಬಿಕ ಹಿನ್ನೆಲೆ ಮತ್ತು ಸಾಂಸ್ಕೃತಿಕ ಬೇರುಗಳು:**

ಅತುಲ್ ಸುಸಂಸ್ಕೃತ ಕೌಟುಂಬಿಕ ಹಿನ್ನೆಲೆಇರುವ ಅವರ ತಂದೆ ತೋಡಾರು ಜೀವಂಧರ ಹೆಗ್ಡೆ ಅವರು ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಏರೋನಾಟಿಕಲ್ ಇಂಜಿನಿಯರ್ ಆಗಿ ದಶಕಗಳ ಕಾಲ ಮುಂಬಯಿನಲ್ಲಿ ಕರ್ತವ್ಯ ನಿರ್ವಹಿಸಿ, ದೇಶದ ಸೇವೆ ಸಲ್ಲಿಸಿದವರು. ತಾಯಿ ಶಕುಂತಲಾ ಹೆಗ್ಡೆ. ಅತುಲ್ ಅವರು ಮುಂಬಯಿ ಶೋನಿಮಾ ಅವರನ್ನು ವಿವಾಹವಾಗಿದ್ದರು. ಅತುಲ್ ದಂಪತಿಗೆ ಮಕ್ಕಳಿರಲಿಲ್ಲವಾದರೂ, ತಮ್ಮ ಸಂಸ್ಥೆಯ ಉದ್ಯೋಗಿಗಳನ್ನು ಮತ್ತು ಸೃಜನಶೀಲ ಜಗತ್ತಿನ ತಂಡವನ್ನು ಅವರು ಒಂದು ಕುಟುಂಬದಂತೆ ಪ್ರೀತಿಸುತ್ತಿದ್ದರು. ಅವರ ವ್ಯಕ್ತಿತ್ವವು ಜೈನ ಧರ್ಮದ ಅಹಿಂಸೆ, ಸತ್ಯ ಮತ್ತು ಶ್ರಮದ ತಳಹದಿಯ ಮೇಲೆ ನಿರ್ಮಾಣವಾಗಿತ್ತು. ಇವರ ಅಗಲಿದ ಆತ್ಮಕ್ಕೆ ಉತ್ತಮ ಸದ್ಗತಿ ಸಿಗಲಿ ಇವರ ಅಗಲುವಿಕೆಯಿಂದ ಆಗಿರುವ ದುಃಖವನ್ನು ಸಹಿಸುವ ಶಕ್ತಿ ಮೃತರ ತಂದೆ–ತಾಯಿ, ಪತ್ನಿಗೆ ಸಿಗಲಿ ಎಂದು ಜಿನೇಂದ್ರ ಭಗವಂತರಲ್ಲಿ ಪ್ರಾರ್ಥಿಸುವುದಾಗಿ ದಿಗಂಬರ ಜೈನ ಮಠ ಮೂಡುಬಿದಿರೆ ಇದರ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಪಂಡಿತಾಚಾರ್ಯ ವರ್ಯ ಮಹಾ ಸ್ವಾಮೀಜಿ ಜಿನೇಂದ್ರ ಸ್ಮರಣೆಗಳೊಂದಿಗೆ ಸಂತಾಪ ವ್ಯಕ್ತಪಡಿಸಿದ್ದಾರೆ.

**ವೃತ್ತಿಜೀವನದ ಪಯಣ: ಅಸಾಧಾರಣ ಕ್ರಾಂತಿ:**

1990ರ ದಶಕದ ಮಧ್ಯಭಾಗದಲ್ಲಿ ಹವಾಸ್ ಸಂಸ್ಥೆಯಲ್ಲಿ ಕ್ಲೈಂಟ್ ಸರ್ವಿಸಸ್ ಡೈರೆಕ್ಟರ್ ಆಗಿ ವೃತ್ತಿ ಬದುಕಿನ ಮೆಟ್ಟಿಲು ಏರಿದ ಅತುಲ್ ಹೆಗ್ಡೆ, ತಮ್ಮ ಚುರುಕುತನದಿಂದ ಶೀಘ್ರವೇ ಉನ್ನತ ಸ್ಥಾನಗಳನ್ನು ಅಲಂಕರಿಸಿದರು. 2003ರಲ್ಲಿ ವ್ಯಾಸ್ ಜಿಯಾನೆಟ್ಟಿ ಕ್ರಿಯೇಟಿವ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಆಗಿ ಸೇವೆ ಸಲ್ಲಿಸಿದರು. 2008ರಲ್ಲಿ ಇಗ್ನೈಟ ಡಿಜಿಟಲ್ ಸರ್ವಿಸಸ್‌ನ ಸಿಇಓ ಆಗಿ, ಭಾರತದಲ್ಲಿ ಡಿಜಿಟಲ್ ಮಾರ್ಕೆಟಿಂಗ್‌ನ ಆರಂಭಿಕ ಹಂತದ ಕ್ರಾಂತಿಯ ನೇತೃತ್ವ ವಹಿಸಿದರು. 2015ರಲ್ಲಿ ಸುಧೀರ್ ಮೆನನ್ ಅವರೊಂದಿಗೆ ಸೇರಿ ರೈನ್ ಮೇಕರ್ ವೆಂಚರ್ಸ್ ಅನ್ನು ಸ್ಥಾಪಿಸಿ, ತಂತ್ರಜ್ಞಾನ ಆಧಾರಿತ ಹೂಡಿಕೆಯಲ್ಲಿ ಹೊಸ ಆಯಾಮ ಸೃಷ್ಟಿಸಿದರು.

**ಯಾಪ್ ಸಂಸ್ಥೆಯ ಮೂಲಕ ಹೊಸ ಇತಿಹಾಸ:**

2016ರಲ್ಲಿ ಸ್ಥಾಪನೆಗೊಂಡ ಯಾಪ್ ಸಂಸ್ಥೆಯು ಅತುಲ್ ಹೆಗ್ಡೆ ಅವರ ದೂರದೃಷ್ಟಿಯ ಫಲಶ್ರುತಿ. ಡಿಸೈನ್, ಕಂಟೆಂಟ್ ಮತ್ತು ಮೀಡಿಯಾ ಡಿಸ್ಟ್ರಿಬ್ಯೂಷನ್ ಅನ್ನು ಒಂದೇ ಸೂರಿನಡಿ ತರುವ ಅವರ ಕಲ್ಪನೆ ಅದ್ಭುತವಾಗಿ ಸಾಕಾರಗೊಂಡಿತು. ಮಾರುತಿ ಸುಜುಕಿ, ಐಟಿಸಿ, ಆಪಲ್, ಅದಾನಿ, ದುಬೈ ಟೂರಿಸಂ ಮತ್ತು ಎಸ್‌ಬಿಐ ಕಾರ್ಡ್ಸ್‌ನಂತಹ ದೈತ್ಯ ಸಂಸ್ಥೆಗಳನ್ನು ಗ್ರಾಹಕರನ್ನಾಗಿ ಹೊಂದಿದ್ದ ಯಾಪ್, ಭಾರತ, ಸಿಂಗಾಪುರ ಮತ್ತು ಯುಎಇಯಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿತು. ಆರ್ಥಿಕ ವರ್ಷ 2026ರಲ್ಲಿ ಯಾಪ್ ಸಂಸ್ಥೆಯು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿಗೊಂಡು, ಭಾರತದ ಮೊದಲ ಸ್ವತಂತ್ರ ಡಿಜಿಟಲ್ ಏಜೆನ್ಸಿ ನೆಟ್‌ವರ್ಕ್ ಆಗಿ ಐಪಿಓ ಮೂಲಕ ಸಾರ್ವಜನಿಕವಾಯಿತು. ಗೋಜೂಪ್ ಗ್ರೂಪ್ ಸ್ವಾಧೀನ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿನ ಅವರ ಹೂಡಿಕೆಗಳು ಅವರ ಭವಿಷ್ಯದ ದೃಷ್ಟಿಕೋನಕ್ಕೆ ಸಾಕ್ಷಿಯಾದವು.

**ವ್ಯಕ್ತಿತ್ವ ಮತ್ತು ಕೊನೆಯ ಸಂದೇಶ:**

ಅತುಲ್ ಹೆಗ್ಡೆ ಅವರು ಕೇವಲ ಕಾರ್ಪೊರೇಟ್ ಜಗತ್ತಿನ ನಾಯಕರಾಗಿರಲಿಲ್ಲ; ಅವರು ಸ್ನೀಕರ್ಸ್ ಸಂಸ್ಕೃತಿ ಮತ್ತು ಸಮಕಾಲೀನ ಕಲೆಗಳ ಬಗ್ಗೆ ವಿಶೇಷ ಒಲವು ಹೊಂದಿದ್ದರು. ಅವರ ಸಾರ್ವಜನಿಕ ವ್ಯಕ್ತಿತ್ವದಲ್ಲಿ ಒಂದು ವಿಶಿಷ್ಟ ಶೈಲಿ ಇತ್ತು, ಅದು ಅವರನ್ನು ಇತರರಿಗಿಂತ ಭಿನ್ನವಾಗಿ ನಿಲ್ಲಿಸುತ್ತಿತ್ತು. ನಿಧನಕ್ಕೆ ಎರಡು ವಾರಗಳ ಮೊದಲು ಲಿಂಕ್ಡ್‌ಇನ್‌ನಲ್ಲಿ ಅವರು ಹಂಚಿಕೊಂಡ ಸಾಲುಗಳು ಇಂದಿಗೂ ಅವರ ಸಾಧನೆಯ **ತೀವ್ರತೆಯನ್ನು ಸಾರುತ್ತವೆ:** "ವ್ಯವಹಾರದಲ್ಲಿ ಕೆಲವು ವರ್ಷಗಳು ಸಂಖ್ಯೆಗಳನ್ನು ಬದಲಾಯಿಸುತ್ತವೆ, ಆದರೆ ಕೆಲವು ವರ್ಷಗಳು ನಿಮ್ಮ ಕಥೆಯನ್ನೇ ಬದಲಾಯಿಸುತ್ತವೆ. ಆರ್ಥಿಕ ವರ್ಷ 2026 ನಮಗೆ ಅಂತಹ ಬದಲಾವಣೆಯ ವರ್ಷವಾಗಿತ್ತು. ಶ್ರೀ ರಾಜ್ ನಾಯಕ್ ಅವರನ್ನು ತಮ್ಮ ಮಾರ್ಗದರ್ಶಕ ಎಂದು ಗೌರವಿಸಿದ ಅವರ ವಿನಮ್ರತೆ, ಅವರ ಉನ್ನತ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

**ಆಸ್ತಿ ಮತ್ತು ಸಂಪತ್ತಿನ ವಾಸ್ತವ:**

ಅತುಲ್ ಹೆಗ್ಡೆ ಅವರ ಆರ್ಥಿಕ ಮೌಲ್ಯದ ಕುರಿತಂತೆ ಹರಿದಾಡುತ್ತಿರುವ ಆರು ಸಾವಿರ ಕೋಟಿ ರೂ.ಗಳ ಅಂಕಿಅಂಶವು ಯಾವುದೇ ವಾಸ್ತವಿಕ ಆಧಾರಗಳನ್ನು ಹೊಂದಿಲ್ಲ. ಮಾರುಕಟ್ಟೆಯ ವಿಶ್ಲೇಷಣೆ ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ಆರ್ಥಿಕ ದತ್ತಾಂಶಗಳ ಪ್ರಕಾರ, ಯಾಪ್ ಡಿಜಿಟಲ್ ಸಂಸ್ಥೆಯ ಒಟ್ಟು ಮಾರುಕಟ್ಟೆ ಬಂಡವಾಳವು ಸುಮಾರು 400 ಕೋಟಿಗಳ ವ್ಯಾಪ್ತಿಯಲ್ಲಿದೆ. ಅತುಲ್ ಅವರು ಕಂಪನಿಯಲ್ಲಿ ಪಾಲನ್ನು ಹೊಂದಿದ್ದರು. ಈ ಷೇರು ಬಂಡವಾಳದ ಮೌಲ್ಯವನ್ನು ಲೆಕ್ಕಹಾಕಿದಾಗ, ಅವರ ವೈಯಕ್ತಿಕ ಆಸ್ತಿಯು ಸಂಸ್ಥೆಯ ಷೇರು ಮೌಲ್ಯದ ಆಧಾರದ ಮೇಲೆ ಕೆಲವು ಕೋಟಿಗಳಲ್ಲಿ ಇರುತ್ತದೆಯೇ ಹೊರತು, ಆರು ಸಾವಿರ ಕೋಟಿ ರೂ.ಗಳಲ್ಲ. ಅತುಲ್ ಹೆಗ್ಡೆ ಅವರು ಕೇವಲ ಹಣದ ಅಳತೆಯಿಂದ ಅಳೆಯಲಾಗದಷ್ಟು ದೊಡ್ಡ ಸಾಧಕರು. ಅವರ ಅಪ್ಪಟ ಶ್ರೀಮಂತಿಕೆ ಇರುವುದು ಅವರು ಸೃಷ್ಟಿಸಿದ ಸಂಸ್ಥೆಯ ಬೌದ್ಧಿಕ ಸಂಪತ್ತು, ದೂರದೃಷ್ಟಿ ಮತ್ತು ಅವರು ಡಿಜಿಟಲ್ ಮಾರ್ಕೆಟಿಂಗ್ ರಂಗದಲ್ಲಿ ಹಾಕಿಕೊಟ್ಟ ಹೊಸ ಹಾದಿಯಲ್ಲಿ. ಅತುಲ್ ನಮ್ಮನ್ನು ಅಗಲಿದ್ದರೂ, ಅವರು ಹಾಕಿಕೊಟ್ಟ ದಾರಿ ಮತ್ತು ರೂಪಿಸಿದ ಸೃಜನಶೀಲ ಸಂಸ್ಥೆಗಳು ಭಾರತದ ಡಿಜಿಟಲ್ ಇತಿಹಾಸದಲ್ಲಿ ಅತುಲ್ ಹೆಗ್ಡೆ ಅವರ ಹೆಸರನ್ನು ಶಾಶ್ವತವಾಗಿ ಉಳಿಸುತ್ತವೆ ಎಂದು ಅವರ ಮಿತ್ರವೃಂದ ತಿಳಿಸಿದೆ.

# ಮೂವರು ಕನ್ನಡಿಗರಿಂದ ಸುರಕ್ಷಿತ ಭವಿಷ್ಯಕ್ಕಾಗಿ ವಿಜ್ಞಾನ ಜಾಗೃತಿ ಮೂಡಿಸುವ ಸಂಕಲ್ಪ

**ನವದೆಹಲಿ, ಜು.10:** ಸುರಕ್ಷಿತ ಭವಿಷ್ಯಕ್ಕಾಗಿ ವಿಜ್ಞಾನ ಎಂಬ ಧ್ಯೇಯದೊಂದಿಗೆ ಜಮ್ಮುವಿನ ಕತ್ರಾದಿಂದ ಕನ್ಯಾಕುಮಾರಿವರೆಗೆ ಮೂವರು ಕನ್ನಡಿಗರು ಪ್ಯಾನ್ ಇಂಡಿಯಾ ಸೈಕ್ಲಿಂಗ್ ಅಭಿಯಾನ ಆರಂಭಿಸಿದ್ದಾರೆ.

ಬೆಂಗಳೂರು ಮೂಲದ ಶತವೀರ್ ರೊಟ್ಟಿ, ಅವರ ಹಿರಿಯ ಪುತ್ರ ವಿನಯ್ ರೊಟ್ಟಿ ಹಾಗೂ ಕಿರಿಯ ಪುತ್ರ ಸುಮನ್ ರೊಟ್ಟಿ ಈ ಅಭಿಯಾನ ಕೈಗೊಂಡಿದ್ದಾರೆ. ಮೂವರು ಕುಟುಂಬ ಸದಸ್ಯರು ಒಟ್ಟಾಗಿ ಸೈಕಲ್ ಮೂಲಕ ದೇಶದ ವಿವಿಧ ಭಾಗಗಳನ್ನು ಸಂಚರಿಸುತ್ತಿದ್ದಾರೆ. ಜುಲೈ 4ರಿಂದ ಈ ಅಭಿಯಾನ ಆರಂಭವಾಗಿದ್ದು ಪಂಜಾಬ್, ಹರಿಯಾಣ ಮೂಲಕ ಸದ್ಯ ದೆಹಲಿಯನ್ನು ತಲುಪಿದೆ. ಪ್ರಯಾಣ ಮಾರ್ಗದಲ್ಲಿ ವಿಜ್ಞಾನ ಆಧಾರಿತ ಕೃಷಿ, ಸುರಕ್ಷಿತ ಆಹಾರ ಉತ್ಪಾದನೆ, ಪರಿಸರ ಸುಸ್ಥಿರತೆ ಹಾಗೂ ಆರೋಗ್ಯಕರ ಜೀವನಶೈಲಿಯ ಕುರಿತು ಜನಜಾಗೃತಿ ಮೂಡಿಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ 44 ಮೂಲಕ ಸುಮಾರು 3,600 ಕಿಲೋಮೀಟರ್ ದೂರವನ್ನು 35ರಿಂದ 40 ದಿನಗಳಲ್ಲಿ ಕ್ರಮಿಸುವ ಗುರಿ ಹೊಂದಲಾಗಿದೆ. ಹವಾಮಾನ ಹಾಗೂ ಭೂಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಪ್ರತಿದಿನ 130ರಿಂದ 150 ಕಿಲೋಮೀಟರ್ ಸೈಕಲ್ ಸವಾರಿ ಮಾಡುವ ಯೋಜನೆ ರೂಪಿಸಲಾಗಿದೆ. ಪ್ರಯಾಣದ ವೇಳೆ ದೇಶದ ಪ್ರಮುಖ ನಗರಗಳಿಗೆ ಭೇಟಿ ನೀಡಿ, ಸಾರ್ವಜನಿಕರೊಂದಿಗೆ ಸಂವಾದ ನಡೆಸುವ ಮೂಲಕ ವಿಜ್ಞಾನ ಆಧಾರಿತ ಕೃಷಿ ಪದ್ಧತಿ, ಸುರಕ್ಷಿತ ಆಹಾರ ಉತ್ಪಾದನೆ, ಪರಿಸರ ಸಂರಕ್ಷಣೆ ಮತ್ತು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ತಿಳಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಈ ಅಭಿಯಾನವು ದೈಹಿಕ ಸಾಮರ್ಥ್ಯ, ವಿಜ್ಞಾನ, ಪರಿಸರ ಸಂರಕ್ಷಣೆಯ ಉದ್ದೇಶ ಹೊಂದಿದೆ.

# ಪಾಕಿಸ್ತಾನಿ ಉಗ್ರಗಾಮಿ ಜೊತೆ ಸಂಪರ್ಕ ಮಹಾರಾಷ್ಟ್ರ ಎಟಿಎಸ್‌ನಿಂದ 10 ಮಂದಿ ಬಂಧನ

**ಮುಂಬೈ, ಜು.10:** ಪಾಕಿಸ್ತಾನಿ ಉಗ್ರಗಾಮಿಯೊಂದಿಗೆ ಸಂಪರ್ಕ ಹೊಂದಿರುವ ಹತ್ತು ವ್ಯಕ್ತಿಗಳನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದೆ. ಪಾಕಿಸ್ತಾನದ ಉಗ್ರ ಶಹಜಾದ್ ಭಟ್ಟಿ ಜೊತೆಗಿನ ಸಂಪರ್ಕದ ಬಗ್ಗೆ ಮಾಹಿತಿ ಪಡೆದ ನಂತರ ನಾಗ್ಪುರ ಎಟಿಎಸ್ ಈ ಹತ್ತು ಯುವಕರನ್ನು ಬಂಧಿಸಿದೆ.

ಈ ಯುವಕರಲ್ಲಿ ಐದು ಮಂದಿ ನಾಗ್ಪುರ ನಗರದವರಾಗಿದ್ದರೆ, ಉಳಿದವರು ವಿದರ್ಭ ಪ್ರದೇಶದ ವಿವಿಧ ಜಿಲ್ಲೆಗಳಿಂದ ಬಂದವರು; ವಿವಿಧ ಸ್ಥಳಗಳಲ್ಲಿ ನಡೆಸಿದ ಕಾರ್ಯಾಚರಣೆಗಳಲ್ಲಿ ಅವರನ್ನು ಏಕಕಾಲದಲ್ಲಿ ಬಂಧಿಸಲಾಗಿದೆ. ಈ ಯುವಕರು ಸಾಮಾಜಿಕ ಮಾಧ್ಯಮಗಳ ಮೂಲಕ ಶಹಜಾದ್ ಭಟ್ಟಿ ಅವರೊಂದಿಗೆ ಸಂಪರ್ಕದಲ್ಲಿದ್ದರು ಎಂದು ತಿಳಿದು ಬಂದಿದೆ. ಭಟ್ಟಿಗಾಗಿ ಅವರು ಏನು ಕೆಲಸ ಮಾಡುತ್ತಿದ್ದರು, ಅವರಿಗೆ ಯಾವ ನಿರ್ದಿಷ್ಟ ಕೆಲಸಗಳನ್ನು ನಿಯೋಜಿಸಲಾಗಿತ್ತು ಹಾಗೂ ಅವರು ಎಷ್ಟು ಸಂಭಾವನೆಯನ್ನು ಪಡೆಯುತ್ತಿದ್ದರು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳವು ಶುಕ್ರವಾರ ಬೆಳಗ್ಗೆ 7 ಗಂಟೆಯಿಂದ ಪಾಕಿಸ್ತಾನಿ ಉಗ್ರ ಶಹಜಾದ್ ಭಟ್ಟಿ ಜೊತೆ ಸಂಪರ್ಕಕ್ಕೆ ಬಂದ ಜನರನ್ನು ತನಿಖೆ ನಡೆಸುತ್ತಿದೆ. ಈ ನಿಟ್ಟಿನಲ್ಲಿ, ಮಹಾರಾಷ್ಟ್ರದಲ್ಲಿ ಭಯೋತ್ಪಾದನಾ ನಿಗ್ರಹ ದಳದ ಒಟ್ಟು 14 ಘಟಕಗಳ ಅಡಿ ಒಟ್ಟು 112 ಜನರನ್ನು ವಿವಿಧ ತಂಡಗಳು ವಿಚಾರಣೆ ನಡೆಸುತ್ತಿದ್ದು, ಅವರು ಎಲ್ಲಿದ್ದಾರೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಶಹಜಾದ್ ಭಟ್ಟಿ ಸಾಮಾಜಿಕ ಮಾಧ್ಯಮಗಳ ಮೂಲಕ ಯುವಕರನ್ನು ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಚೋದಿಸುತ್ತಿದ್ದಾರೆ ಎಂಬ ಅನುಮಾನದ ಮೇಲೆ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ತಿಳಿಸಿದೆ.

### ಅನಾಥ ವಾಹನಗಳಿಗೆ ಮುಕ್ತಿ ನೀಡುವ ಕಾರ್ಯಾಚರಣೆ ಆರಂಭ

# ಬೆಂಗಳೂರಿನಲ್ಲಿ 1581 ವಾಹನಗಳ ಗುರುತು: ಸಚಿವ ಕೃಷ್ಣ ಬೈರೇಗೌಡ

**ಬೆಂಗಳೂರು, ಜು.10:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ರಸ್ತೆ, ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅನಾಥ ವಾಹನಗಳಿಗೆ ಸರ್ಕಾರ ಮುಕ್ತಿ ನೀಡಲು ಸಜ್ಜಾಗಿದೆ.



ಹೆಚ್ಚು ದಿನಗಳಿಂದ ಅನಾಥವಾಗಿ ನಿಂತಿರುವ ವಾಹನಗಳ ವಿರುದ್ಧ ಜಿಬಿಎ ಶುಕ್ರವಾರದಿಂದ ಬಿರುಸಿನ ಕಾರ್ಯಾಚರಣೆ ಆರಂಭಿಸಿದೆ. ಜುಲೈ 10ರಿಂದ ಈ ಕಾರ್ಯಾಚರಣೆ ಜಾರಿಗೆ ಬಂದಿದ್ದು, ಐದು ನಗರ ಪಾಲಿಕೆಗಳು ಹಾಗೂ ಸಂಚಾರ ಪೊಲೀಸ್ ಇಲಾಖೆ ಜಂಟಿಯಾಗಿ ಅನಾಥ ವಾಹನಗಳನ್ನು ಗುರುತಿಸಿ ತೆರವುಗೊಳಿಸುವ ಕ್ರಮ ಕೈಗೊಂಡಿವೆ.

ಶುಕ್ರವಾರ ಬೆಳಗ್ಗೆ ಕ್ವೀನ್ಸ್ ರಸ್ತೆಯಲ್ಲಿ ಅನಾಥ ವಾಹನಗಳ ತೆರವು ಕಾರ್ಯಾಚರಣೆಗೆ ಚಾಲನೆ ನೀಡಿದ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ಜಿಬಿಎ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತದೆ. ರಸ್ತೆ ಹಾಗೂ ಪಾದಚಾರಿ ಮಾರ್ಗದಲ್ಲಿ ಯಾರು ತಮ್ಮ ಸ್ವಂತ ವಾಹನ ಬಿಟ್ಟಿದ್ದಾರೋ ಇವುಗಳ ತೆರವು ಕಾರ್ಯ ಮಾಡಬೇಕು ಅಂತ 15 ದಿನಗಳ ಹಿಂದೆ ಮನವಿ ಮಾಡಿದ್ದೆವು. ಜನರಿಗೆ ಆಗುತ್ತಿರುವ ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಕ್ರಮ ತೆಗೆದುಕೊಂಡಿದ್ದೇವೆ.

ಈ ರೀತಿ ವಾಹನಗಳನ್ನು ತಿಂಗಳಾನುಗಟ್ಟಲೆ ಬಿಟ್ಟಿರುತ್ತಾರೆ. ಇವು ಯಾರಿಗೇ ಸೇರಿದ್ದು ಎಂಬುದು ಗೊತ್ತಿಲ್ಲ. ಸಾರ್ವಜನಿಕ ಸ್ಥಳಗಳನ್ನ ಅತಿಕ್ರಮಣ ಮಾಡಿಕೊಂಡಿರೋದು ಕಾನೂನು ಉಲ್ಲಂಘನೆ. ಒಂದು ರೀತಿಯಲ್ಲಿ ಬೆಂಗಳೂರು ಅಸಹ್ಯವಾಗಿ ಕಾಣಲು ಇದು ಕಾರಣವಾಗಿದೆ ಎಂದರು.

ಈಗಾಗಲೇ ಪೊಲೀಸರು 1581 ವಾಹನಗಳು ರಸ್ತೆಬದಿಯಲ್ಲಿ ಬಿಟ್ಟಿರುವುದನ್ನು ಗುರುತು ಮಾಡಿದ್ದಾರೆ. ಬಹುಶಃ ಅದರ ಸಂಖ್ಯೆ ಹೆಚ್ಚಿದೆ. ಸದ್ಯ ವಾಹನಕ್ಕೆ ಒಂದು ವಾರದ ನೋಟೀಸ್ ಅಂಟಿಸುತ್ತೇವೆ. ನೋಟಿಸ್ ಅಂಟಿಸಿ ಒಂದು ವಾರದ ಅವಕಾಶ ಮಾಲೀಕರಿಗೆ ನೀಡಲಾಗುತ್ತೆ. ಸದ್ಯಕ್ಕೆ 500ರಿಂದ 1000 ರೂ. ದಂಡ ಇದೆ. ಒಂದು ವಾರದ ನಂತರವೂ ತೆರವುಗೊಳಿಸದಿದ್ದರೆ ಟೋಯಿಂಗ್ ಮಾಡಬೇಕು. ಆದಾದ ಬಳಿಕ ಅವರು ಟೋಯಿಂಗ್ ವೆಚ್ಚವನ್ನು ಕಟ್ಟಿ ವಾಹನ ಬಿಡಿಸಿಕೊಂಡು ಹೋಗಬಹುದು. ಆಗಲೂ ಬಾರದೇ ಇದ್ದರೆ ಹರಾಜು ಹಾಕ್ತೀವೆ. ಯಾರು ಬೇಕಾದರೂ ಹರಾಜಲ್ಲಿ ಭಾಗವಹಿಸಬಹುದು ಎಂದು ಕೃಷ್ಣಬೈರೇಗೌಡ ಹೇಳಿದರು.

**ವರದಿ ಮಾಡಲು ಸಾರ್ವಜನಿಕರಿಗೂ ಅವಕಾಶ**

ಸದ್ಯ 1581 ವಾಹನಗಳ ಪಟ್ಟಿ ಇದೆ.. ಇದೇ ಸಂಪೂರ್ಣ ಪಟ್ಟಿ ಅಲ್ಲ ಅಸ್ತ್ರಂ ಆಪ್‌ನಲ್ಲಿ ಸಾರ್ವಜನಿಕರು ಕೂಡ ಇಂತಹ ಬೀಡಾಡಿ ವಾಹನವನ್ನು ರಿಪೋರ್ಟ್ ಮಾಡಬಹುದು. ಸರ್ಕಾರದ ಗಮನಕ್ಕೆ ಸಾರ್ವಜನಿಕರು ತರಬಹುದು. ಜನರು ನೆಮ್ಮದಿಯಾಗಿ ಬದುಕಲು ಸಹಾಯವಾಗಬೇಕು. ನಿಮ್ಮ ವಾಹನವನ್ನು ಸ್ವಂತ ಜಾಗದಲ್ಲಿ ಇಟ್ಟುಕೊಳ್ಳಿ. ರಸ್ತೆಗಳಲ್ಲಿ ನಿಲ್ಲಿಸುವಂತಿಲ್ಲ. ರಸ್ತೆಗಳು ಗುಜರಿ ಜಾಗವಲ್ಲ ಎಂದು ಕೃಷ್ಣಬೈರೇಗೌಡ ಎಚ್ಚರಿಕೆ ನೀಡಿದರು.

# ರಸ್ತೆಬದಿ ವಾಹನ ನಿಲ್ಲಿಸಿದರೆ ದಂಡ ಖಚಿತ

## ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಎಚ್ಚರಿಕೆ

**ಬೆಂಗಳೂರು, ಜು.10:** ರಸ್ತೆಬದಿ ಹಾಗೂ ನಿಲುಗಡೆ ರಹಿತ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸುವವರ ವಿರುದ್ಧ ದಂಡ ಪ್ರಯೋಗ ನಡೆಸಲಾಗುವುದು ಎಂದು ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಅವರು ಎಚ್ಚರಿಕೆ ನೀಡಿದ್ದಾರೆ.



ನಗರದಲ್ಲಿ ಸಂಚಾರದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸಂಚಾರಿ ಪೊಲೀಸರು ಹಾಗೂ ಜಿಬಿಎ ಜಂಟಿಯಾಗಿ ಈ ಮಹತ್ವದ ಕಾರ್ಯಾಚರಣೆ ನಡೆಸುತ್ತಿವೆ ಎಂದು ಹೇಳಿದರು.

ರಸ್ತೆಬದಿಯಲ್ಲಿ ಮತ್ತು ನಿಲುಗಡೆ ರಹಿತ ಸ್ಥಳಗಳಲ್ಲಿ ಶಾಶ್ವತವಾಗಿ ನಿಲ್ಲಿಸಲಾದ ಅನಾಥ ವಾಹನಗಳನ್ನು ತೆರವುಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ 1580 ಇಂತಹ ವಾಹನಗಳನ್ನು ಗುರುತಿಸಲಾಗಿದೆ. ಅವುಗಳಿಗೆ ನೋಟೀಸ್ ಅಂಟಿಸಿ 7 ದಿನಗಳ ಕಾಲಾವಕಾಶ ನೀಡಲಾಗುತ್ತದೆ.

ಈ ಅವಧಿಯೊಳಗೆ ವಾಹನ ಮಾಲೀಕರು 500 ರೂ. ಪಾರ್ಕಿಂಗ್ ದಂಡ ಪಾವತಿಸಿ ತಮ್ಮ ವಾಹನಗಳನ್ನು ತೆಗೆದುಕೊಂಡು ಹೋಗಬಹುದು. ಒಂದು ವೇಳೆ ಮಾಲೀಕರು ನೋಟೀಸ್ ಅವಧಿಯಲ್ಲಿ ವಾಹನಗಳನ್ನು ತೆರವುಗೊಳಿಸದಿದ್ದರೆ ನಮ್ಮ ಪೊಲೀಸರು ಅವುಗಳನ್ನು ಟೋಯಿಂಗ್(ತೆರವು)ಮಾಡುತ್ತಾರೆ. ನಂತರ 15 ದಿನಗಳ ಕಾಲ ಸಾರ್ವಜನಿಕ ಪ್ರಕಟಣೆ ನೀಡುತ್ತಾರೆ.

ಈ ಅವಧಿಯಲ್ಲೂ ಮಾಲೀಕರು ಬಾರದಿದ್ದರೆ ಜಿಬಿಎ ನಿಯಮಗಳ ಪ್ರಕಾರ ಅಂತಹ ವಾಹನಗಳನ್ನು ಹರಾಜು ಮಾಡಲಾಗುವುದು ಎಂದು ಕಾರ್ತಿಕ್ ರೆಡ್ಡಿ ತಿಳಿಸಿದ್ದಾರೆ.

ವಾಹನ ಮಾಲೀಕರು ಎಲ್ಲೆಂದರಲ್ಲಿ ರಸ್ತೆಬದಿ, ನೋ-ಪಾರ್ಕಿಂಗ್ ಸ್ಥಳಗಳಲ್ಲಿ ವಾಹನವನ್ನು ನಿಲ್ಲಿಸುವುದನ್ನು ತಪ್ಪಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

# ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಸ್ಪಷ್ಟತೆಗಾಗಿ ಹೊಸ ಮಾರ್ಗಸೂಚಿ ಪ್ರಕಟ

**ಬೆಂಗಳೂರು, ಜು.10:** ರಾಜ್ಯ ಸರ್ಕಾರಿ ನೌಕರರ ವರ್ಗಾವಣೆ ಪ್ರಕ್ರಿಯೆಯಲ್ಲಿ ಉಂಟಾಗುತ್ತಿದ್ದ ಗೊಂದಲಗಳಿಗೆ ತೆರೆ ಎಳೆಯುವಂತೆ ಸರ್ಕಾರ ಹೊಸ ಮಾರ್ಗಸೂಚಿ ಹೊರಡಿಸಿದೆ. ಅಬಕಾರಿ ಉಪ ಆಯುಕ್ತ ಕೆ. ಅರುಣ್ ಕುಮಾರ್ ಅವರ ಪ್ರಕರಣದಲ್ಲಿ ಹೈಕೋರ್ಟ್ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಯಾವುದೇ ನೌಕರರನ್ನು ಸ್ಥಳನಿಯುಕ್ತಿ ನೀಡದೆ ಕಡ್ಡಾಯ ನಿರೀಕ್ಷಣೆಯಲ್ಲಿಡುವುದು ನ್ಯಾಯಾ ಲಯದ ನಿರ್ದೇಶನಕ್ಕೆ ವಿರುದ್ಧವೆಂದು ಸರ್ಕಾರ ಸ್ಪಷ್ಟಪಡಿಸಿದೆ.

ಈ ತೀರ್ಪು ಆಡಳಿತಾತ್ಮಕ ವ್ಯವಸ್ಥೆಯಲ್ಲಿನ ಪ್ರಮುಖ ಬದ ಲಾವಣೆಗೆ ಕಾರಣವಾಗಿದೆ. ಇದುವರೆಗೆ ಕೆಲ ಸಂದರ್ಭಗಳಲ್ಲಿ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ ನಂತರ ತಕ್ಷಣ ಸ್ಥಳನಿಯುಕ್ತಿ ನೀಡದೆ ನಿರೀಕ್ಷಣೆಯಲ್ಲಿಡಲಾಗುತ್ತಿತ್ತು. ಇದರಿಂದ ನೌಕರರ ಹಕ್ಕುಗಳಿಗೆ ಧಕ್ಕೆ ಜೊತೆಗೆ ಆಡಳಿತಾತ್ಮಕ ಕಾರ್ಯ ಚಟುವಟಿಕೆಗಳಲ್ಲಿ ವಿಳಂಬ ಉಂಟಾಗುತ್ತಿತ್ತು.

ಹೊಸ ಮಾರ್ಗಸೂಚಿಯ ಪ್ರಕಾರ, ಸಾಮಾನ್ಯವಾಗಿ ಯಾವುದೇ ಅಧಿಕಾರಿ ಅಥವಾ ನೌಕರರನ್ನು ವರ್ಗಾವಣೆ ಮಾಡುವಾಗ ಮುಂದಿನ ಹುದ್ದೆ ಸೂಚಿಸದೆ ವರ್ಗಾವಣೆ ಮಾಡಬಾರದು. ಇದು ನೌಕರರ ಹಕ್ಕುಗಳನ್ನು ರಕ್ಷಿಸುವುದರ ಜೊತೆಗೆ ಆಡಳಿತಾತ್ಮಕ ಸ್ಪಷ್ಟತೆಯನ್ನು ಹೆಚ್ಚಿಸುತ್ತದೆ.

ಆದರೆ, ಕಾನೂನು ಸಂಬಂಧಿತ ಸಮಸ್ಯೆಗಳು, ಅಮಾನತು, ಹಣದ ದುರ್ಬಳಕೆ, ಅಧಿಕಾರ ದುರುಪಯೋಗ, ಗಂಭೀರ ಇಲಾಖಾ ವಿಚಾರಣೆಗಳಂತಹ ಪ್ರಕರಣಗಳಲ್ಲಿ ಮಾತ್ರ ತಕ್ಷಣ ಸ್ಥಳನಿಯುಕ್ತಿ ನೀಡಲು ಸಾಧ್ಯವಾಗದಿದ್ದರೆ, ಗರಿಷ್ಠ ಒಂದು ತಿಂಗಳಿಗಿಂತ ಹೆಚ್ಚು ಕಾಲ ಕಡ್ಡಾಯ ನಿರೀಕ್ಷಣೆ ಯಲ್ಲಿಡಬಾರದು ಎಂದು ಸರ್ಕಾರ ತಿಳಿಸಿದೆ.

ಅತ್ಯಂತ ಅನಿವಾರ್ಯ ಪರಿಸ್ಥಿತಿ ಯಲ್ಲಿ ಮಾತ್ರ, ಸೂಕ್ತ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ, ಮುಖ್ಯಮಂತ್ರಿ ಯವರ ಪೂರ್ವಾನುಮೋದನೆ ಪಡೆದು ಗರಿಷ್ಠ ಮೂರು ತಿಂಗಳವರೆಗೆ ಕಡ್ಡಾಯ ನಿರೀಕ್ಷಣೆಯಲ್ಲಿ ಇಡಬಹುದು. ಇದು ಆಡಳಿತಾತ್ಮಕ ನಿರ್ಧಾರಗಳಿಗೆ ರಾಜಕೀಯ ಮತ್ತು ಕಾನೂನುಮಟ್ಟದ ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ. ಈ ಆದೇಶವು ನೌಕರರ ಹಕ್ಕುಗಳನ್ನು ಕಾಪಾಡುವ ಜೊತೆಗೆ, ಇಲಾಖೆಗಳ ಕಾರ್ಯನಿರ್ವಹಣೆಯಲ್ಲಿ ಶಿಸ್ತನ್ನು ತರಲು ಸಹಾಯಕವಾಗಲಿದೆ. ವರ್ಗಾವಣೆ ಪ್ರಕ್ರಿಯೆಯಲ್ಲಿ ಉಂಟಾಗುವ ಅಸ್ಪಷ್ಟತೆಗಳನ್ನು ನಿವಾರಿಸಿ, ನೌಕರರಿಗೆ ನ್ಯಾಯ ದೊರಕುವಂತೆ ಮಾಡುವ ಉದ್ದೇಶದಿಂದ ಸರ್ಕಾರವು ಈ ಕ್ರಮ ಕೈಗೊಂಡಿದೆ.


## ಹಿಂದುಳಿದ ಆಯೋಗದ ವರದಿ ಸದನದಲ್ಲಿ ಮಂಡಿಸಿ, ಚರ್ಚೆಯಾಗಲಿ ಮಾಜಿ ಎಂಎಲ್‌ಸಿ ಎಂ.ಡಿ. ಲಕ್ಷ್ಮೀನಾರಾಯಣ ಆಗ್ರಹ

**ಬೆಂಗಳೂರು, ಜು.10:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರಕ್ಕೆ ಸಲ್ಲಿಸಲಾಗಿರುವ ವರದಿಯನ್ನು ಸದನದಲ್ಲಿ ಮಂಡಿಸಿ, ಚರ್ಚೆಗೆ ಒಳಪಡಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ, ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಸಮಗ್ರ ಚರ್ಚೆಗೆ ಒಳಪಡಿಸಬೇಕು. ವರದಿಯನ್ನು ಸಾರ್ವಜನಿಕ ಗೊಳಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

# ಬೆಂಗಳೂರಿನಲ್ಲಿ ಶೇ.97ರಷ್ಟು ಸಂಚಾರಿ ನಿಯಮ ಉಲ್ಲಂಘನೆ: ತಂತ್ರಜ್ಞಾನದ ಮೂಲಕ ಪತ್ತೆ

**ಬೆಂಗಳೂರು, ಜು.10:** ಬೆಂಗಳೂರಿ ನಲ್ಲಿ ವಾಹನಗಳ ಸಂಖ್ಯೆಗಳು ತ್ವರಿತಗತಿಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಪರಿಣಾಮ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಇದಲ್ಲದೆ ನಿಯಮ ಉಲ್ಲಂಘನೆ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿವೆ. ಇದರಿಂದ ಪ್ರತಿನಿತ್ಯ ಸಂಚಾರಿ ಸಮಸ್ಯೆಗಳನ್ನು ಸಮರ್ಪಕವಾಗಿ ನಿಭಾಯಿಸಲು ಬೆಂಗಳೂರು ನಗರ ಸಂಚಾರಿ ಪೊಲೀಸರಿಗೆ ದೊಡ್ಡ ಸವಾಲಾಗಿದೆ.




ಜೊತೆಗೆ ಬಹುತೇಕ ವಾಹನ ಸವಾರರು, ಚಾಲಕರು ಸಂಚಾರ ನಿಯಮಗಳನ್ನು ಪ್ರತಿದಿನ ಉಲ್ಲಂಘನೆ ಮಾಡುತ್ತಿರುವುದರಿಂದ ಪ್ರಕರಣಗಳ ಸಂಖ್ಯೆಯೂ ಸಹ ಹೆಚ್ಚಾಗುತ್ತಿವೆ.

ಸಂಚಾರಿ ನಿಯಮಗಳ ಉಲ್ಲಂಘನೆ ತಡೆಗಟ್ಟಲು ಸಂಚಾರಿ ಪೊಲೀಸರು ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಟಿಎಂಎಸ್) ನ ಭಾಗವಾದ ಸ್ವಯಂಚಾಲಿತ ಚಲನಾ ವ್ಯವಸ್ಥೆಯನ್ನು ಈಗಾಗಲೇ ನಗರದ ಬಹುತೇಕ ಸ್ಥಳ, ಜಂಕ್ಷನ್‌ಗಳಲ್ಲಿ ಅಳವಡಿಸಿದ್ದು, ಅವುಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

ಸಂಚಾರ ನಿಯಮ ಉಲ್ಲಂ ಘನೆಯ ಶೇ.97ರಷ್ಟು ಪ್ರಕರಣಗಳನ್ನು ನವೀನ ತಂತ್ರಜ್ಞಾನದ ಬಳಕೆಯಿಂದ ಬೆಂಗಳೂರು ನಗರ ಸಂಚಾರಿ ಪೊಲೀಸರು ದಾಖಲಿಸುತ್ತಿದ್ದಾರೆ. ಈಗಾಗಲೇ ಸ್ಮಾರ್ಟ್ ಸಿಟಿ ಹಾಗೂ ಇತರೆ ಯೋಜನೆಗಳಲ್ಲಿ ಅಳವಡಿಸಿರುವ ಕಣ್ಗಾವಲು ಕ್ಯಾಮರಾಗಳನ್ನು ಬಳಸಿ ಕೊಂಡು ಸಂಪರ್ಕರಹಿತ ನಿಯಮ ಜಾರಿ ವ್ಯವಸ್ಥೆಯನ್ನು ಪರಿಚಯಿಸಲು ಮುಂದಾಗಿದೆ. ಡಿಜಿಟಲ್ ಕ್ಯಾಮರಾಗಳು, ಮೊಬೈಲ್ ಫೋನ್‌ಗಳಿಂದ ಛಾಯಾಚಿತ್ರವನ್ನು ಸೆರೆಹಿಡಿದು ಸಂಚಾರ ನಿಯಮ ಉಲ್ಲಂಘನೆಯ ಚಲನ್‌ಗಳನ್ನು ವಿತರಿಸುವುದು ಹಾಗೂ ಸಂಬಂಧಪಟ್ಟ ವಾಹನಗಳ ಮಾಲೀಕರಿಗೆ ಅಂಚೆಯ ಮೂಲಕ ದಂಡ ಪಾವತಿಗೆ ನೋಟೀಸ್ ಕಳುಹಿಸಲಾಗುತ್ತಿದೆ.

ಸಂಚಾರಿ ನಿಯಮ ಉಲ್ಲಂಘನೆಗಳ ಛಾಯಾಚಿತ್ರಗಳನ್ನು ಸೆರೆಹಿಡಿಯಲು ಫೀಲ್ಡ್ ಟ್ರಾಫಿಕ್ ವಯಲೇಷನ್ ವರದಿ (ಎಫ್‌ಟಿವಿಆರ್) ಡಿಜಿಟಲ್ ತಂತ್ರಾಂಶವನ್ನು ಹೊಸದಾಗಿ ಬಿಟಿಪಿ ಅಸ್ತ್ರಂ ಆಪ್ ಮೂಲಕ ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ವಾಹನ ಚಲಾಯಿಸುವಾಗ ಮೊಬೈಲ್ ಬಳಸುವವರ ಸಂಖ್ಯೆ ಹೆಚ್ಚಳ:** ಅಂಕಿ ಅಂಶಗಳನ್ನು ನೋಡಿದರೆ ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಅಲ್ಲದೆ ತಿಂಗಳುಗಳಿಂದ ತಿಂಗಳುಗಳಿಗೆ ಹೆಚ್ಚಾಗುತ್ತಿದೆ.

ಸಂಚಾರಿ ನಿಯಮಗಳನ್ನು ಪಾಲಿಸದೇ, ಪ್ರಾಣ ಲೆಕ್ಕಿಸದೆ ಈ ರೀತಿ ಮೊಬೈಲ್‌ಗಳಲ್ಲಿ ಮಾತನಾಡುತ್ತಿರುವುದು ನಾಗರಿಕ ಸಮಾಜದಲ್ಲಿ ಒಳ್ಳೆಯ ಲಕ್ಷಣವಲ್ಲ. ರಸ್ತೆ ಸುರಕ್ಷತೆ ಯನ್ನು ಹೆಚ್ಚಿಸುವುದು, ಅಪಘಾತ ಗಳನ್ನು ತಗ್ಗಿಸುವುದು ಹಾಗೂ ಸಂಚಾರ ಶಿಸ್ತು ಮೂಡಿಸುವುದು ನಗರ ಸಂಚಾರಿ ಪೊಲೀಸರ ಉದ್ದೇಶವಾಗಿದೆ. ಆದುದರಿಂದ ವಾಹನ ಸವಾರರು, ಚಾಲಕರು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸುರಕ್ಷಿತ ಸಂಚಾರಕ್ಕೆ ಸಹಕರಿಸಬೇಕೆಂದು ನಗರ ಸಂಚಾರಿ ಪೊಲೀಸರು ಮನವಿ ಮಾಡಿ ಕೊಂಡಿದ್ದಾರೆ.

**ಎಲ್ಲೆಲ್ಲಿ ಎಷ್ಟು?** ಜಾಲಹಳ್ಳಿ ಸಂಚಾರಿ ಠಾಣೆ ಪೊಲೀಸರು 2024ರಲ್ಲಿ 83, 2025ರಲ್ಲಿ 640, 2026ರ ಮೇವರೆಗೆ 53 ಪ್ರಕರಣ ದಾಖಲಿಸಿಕೊಂಡು, 2024ರಲ್ಲಿ 99,400 ರೂ. 2025ರಲ್ಲಿ 3,88,400 ರೂ. ಹಾಗೂ ಈ ವರ್ಷದ ಮೇವರೆಗೆ 69,000 ರೂ. ದಂಡ ವಿಧಿಸಿದ್ದಾರೆ. ಜ್ಞಾನಭಾರತಿ ಸಂಚಾರಿ ಠಾಣೆ ಪೊಲೀಸರು 2025ರಲ್ಲಿ 1646 ಪ್ರಕರಣ ದಾಖಲಿಸಿಕೊಂಡು 16,46,000 ರೂ. ಹಾಗೂ ಈ ವರ್ಷದ ಮೇವರೆಗೆ 464 ಪ್ರಕರಣ ದಾಖಲಿಸಿಕೊಂಡು 6,96,000 ರೂ. ದಂಡ ವಿಧಿಸಿದ್ದಾರೆ.

ಮಡಿವಾಳ ಸಂಚಾರಿ ಠಾಣೆ ಪೊಲೀಸರು 2024ರಲ್ಲಿ 148, 2025ರಲ್ಲಿ 862, ಈ ವರ್ಷದ ಮೇ ಅಂತ್ಯಕ್ಕೆ 116 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.ಬೆಳ್ಳಂದೂರು ಠಾಣೆ ಪೊಲೀಸರು 2025ರಲ್ಲಿ 579, ಈ ವರ್ಷದ ಮೇ ಅಂತ್ಯದವರೆಗೆ 303 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸದಾಶಿವ ನಗರ ಠಾಣೆ ಪೊಲೀಸರು 2024 ರಲ್ಲಿ 117, 2025 ರಲ್ಲಿ 1105, ಈ ವರ್ಷದ ಮೇವರೆಗೆ 97 ಪ್ರಕರಣಗಳನ್ನು ನೋಂದಾಯಿಸಿ ಕೊಂಡಿದ್ದಾರೆ. ಈ ವರ್ಷದ ಮೇವರೆಗೆ ಎಲೆಕ್ಟ್ರಾನಿಕ್ ಸಿಟಿ ಸಂಚಾರಿ ಠಾಣೆ ಪೊಲೀಸರು 55, ಹಲಸೂರು 36, ಆಡುಗೋಡಿ 56, ಸಂಜಯನಗರ 66, ಎಚ್‌ಎಸ್‌ಆರ್ ಲೇಔಟ್ 65, ಅಶೋಕನಗರ 68, ಹೆಣ್ಣೂರು 58 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

# ಸಿವಿಲ್ - ಹೈಕೋರ್ಟ್ ಕಾಯ್ದೆ ತಿದ್ದುಪಡಿ ಸಿಂಧುತ್ವ ಎತ್ತಿಹಿಡಿದ ಹೈಕೋರ್ಟ್ ವಿಭಾಗೀಯ ಪೀಠ


ಬಾಕಿ ಇರುವ ವ್ಯಾಜ್ಯಗಳ ಹೊರೆ ತಗ್ಗಿಸಲು ಹಾಗೂ ಆರ್‌ಎಫ್‌ಐ ನಿರ್ಧರಿಸಲು ಬೇಕಾಗುವ ಸಮಯ ಉಳಿತಾಯಕ್ಕೆ ಕ್ರಮ

ಬೆಂಗಳೂರು, ಜು.10: ಹೈಕೋರ್ಟ್‌ನಲ್ಲಿ ಅಪಾರ ಸಂಖ್ಯೆಯಲ್ಲಿ ಬಾಕಿ ಇರುವ ಸಿವಿಲ್ ವ್ಯಾಜ್ಯಗಳ ಹೊರೆ ತಗ್ಗಿಸಲು ಮತ್ತು ನಿಯಮಿತ ಪ್ರಥಮ ಮೇಲ್ಮನವಿಗಳನ್ನು (ಆರ್‌ಎಫ್‌ಎ) ನಿರ್ಧರಿಸಲು ತೆಗೆದುಕೊಳ್ಳಲಾಗುವ ಸಮಯದ ಉಳಿತಾಯ ದೃಷ್ಟಿಯಿಂದ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಕಾಯಿದೆ ಮತ್ತು ಕರ್ನಾಟಕ ಹೈಕೋರ್ಟ್ ಕಾಯಿದೆಗಳ ತಿದ್ದುಪಡಿಯ ಸಿಂಧುತ್ವವನ್ನು ಹೈಕೋರ್ಟ್ ವಿಭಾಗೀಯ ಪೀಠ ಎತ್ತಿಹಿಡಿದಿದೆ.

ಕರ್ನಾಟಕ ಹೈಕೋರ್ಟ್ ಕಾಯಿದೆ ತಿದ್ದುಪಡಿ 2023ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ 2024ರ ಜೂನ್ 19ರಂದು ಹೊರಡಿಸಲಾಗಿರುವ ಅಧಿಸೂಚನೆಯು ಸಂವಿಧಾನದ 14 ಮತ್ತು ಇತರ ನಿಬಂಧನೆಗಳಿಗೆ ವಿರುದ್ಧವಾಗಿದೆ ಮತ್ತು ಅಧಿಕಾರ ವ್ಯಾಪ್ತಿಯನ್ನು ಮೀರಿದ ಕ್ರಮ ಎಂದು ಆಕ್ಷೇಪಿಸಿ ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿಯ ನಾರಾಯಣಮ್ಮ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ರುವ ಹಾಗೂ ಕಲಬುರಗಿಯ ಏಕಸದಸ್ಯ ಪೀಠದ ಆದೇಶದಲ್ಲಿ ಮಾರ್ಪಾಡು ಮಾಡಬೇಕು ಎಂದು ಕೋರಿ ರಾಯಚೂರಿನ ಬ್ರಾಹ್ಮಣ ವಾಡಿಯ ಬಾಬು ರಾವ್ ಮತ್ತು ಸೇಡಂ ತಾಲ್ಲೂಕಿನ ಕೂಕನಳ್ಳಿಯ ಗುರುಲಿಂಗಪ್ಪ ಸಲ್ಲಿಸಿದ್ದ ಮೇಲ್ಮನವಿ ಯನ್ನು ವಿಲೇವಾರಿ ಮಾಡಿರುವ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ಸಿ ಎಂ ಪೂಣಚ್ಚ ಅವರ ನೇತೃತ್ವದ ವಿಭಾಗೀಯ ಪೀಠ 1ಈ ಕುರಿತ ವಿಸ್ತೃತ ತೀರ್ಪು ಪ್ರಕಟಿಸಿದೆ.

ತಿದ್ದುಪಡಿ ಕಾಯಿದೆಯು 2007ರ ಆಗಸ್ಟ್ 28ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೆ ತರುವ ಸರ್ಕಾರದ ಆದೇಶಕ್ಕೆ ಅಸ್ತು ಎಂದಿರುವ ಪೀಠವು ಇನ್ನು ಮುಂದೆ 2007ರಿಂದ ಹೈಕೋರ್ಟ್‌ನಲ್ಲಿ ಬಾಕಿ ಇರುವ ಅಪೀಲುಗಳೆಲ್ಲಾ ಜಿಲ್ಲಾ ನ್ಯಾಯಾಲಯದಲ್ಲೇ ತೀರ್ಮಾನವಾಗುತ್ತವೆ. ಈಗಾಗಲೇ ತೀರ್ಮಾನಗೊಂಡಿರುವ ಡಿಕ್ರಿಗಳಿಗೆ ಮತ್ತು ಅವುಗಳಿಗೆ ನೀಡಲಾಗಿರುವ ತಡೆ ಆದೇಶಗಳು ಹಾಗೇ ಇರುತ್ತವೆ. ಹೈಕೋರ್ಟ್‌ನಲ್ಲಿರುವ ಪೆಂಡಿಂಗ್ ಮೇಲ್ಮನವಿಗಳು ಎಲ್ಲಿಗೆ ಬಂದು ನಿಂತಿವೆಯೋ ಅಲ್ಲಿಂದ ಮುಂದಕ್ಕೆ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾವಣೆ ಆಗುತ್ತವೆ ಮತ್ತು ಹೈಕೋರ್ಟ್‌ನಲ್ಲಿ ಈವರೆಗೆ ಆಗಿರುವ ಆದೇಶಗಳು ಸಿಂಧು ಆಗಿರುತ್ತವೆ ಎಂದು ಸ್ಪಷ್ಟಪಡಿಸಿದೆ.

ಈ ವಿಷಯದಲ್ಲಿ ಬೆಂಗಳೂರಿಗೇ ಪ್ರತ್ಯೇಕ ಕಾಯಿದೆ ಇದ್ದು; ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ತೀರ್ಪುಗಳ ಮೇಲಿನ ಆರ್‌ಎಫ್‌ಎಗಳ ವಿಚಾರಣೆಯನ್ನು ಹೈಕೋರ್ಟ್ ನಡೆಸುವುದನ್ನು ಮುಂದುವರಿಸಲಿದೆ.




ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಕಾಯಿದೆ?1964ರ ಕಾಯಿದೆ ಅಡಿಯಲ್ಲಿ ಬೆಂಗಳೂರು ಹೊರತುಪಡಿಸಿದ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಳು ಮತ್ತು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಕಾಯಿದೆ–1979 ಮತ್ತು ಕರ್ನಾಟಕ ಸಣ್ಣ ವ್ಯಾಜ್ಯ ನ್ಯಾಯಾಲಯಗಳ ಕಾಯಿದೆ?1964ರ ಅಡಿಯಲ್ಲಿ ಕಾರ್ಯ ನಿರ್ವಹಿಸುವ ನ್ಯಾಯಾಧೀಶರ ನಡುವೆ ಸ್ಪಷ್ಟವಾದ ವ್ಯತ್ಯಾಸವಿದೆ ಎಂಬುದನ್ನು ಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಬೆಂಗಳೂರಿನಲ್ಲಿ, ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದಲ್ಲಿ ಮೂಲ ನ್ಯಾಯವ್ಯಾಪ್ತಿಯನ್ನು ಚಲಾಯಿಸುವ ನಗರ ಸಿವಿಲ್ ನ್ಯಾಯಾಧೀಶರಾಗಿ ಕಾರ್ಯ ನಿರ್ವ ಹಿಸುವವರು ಜಿಲ್ಲಾ ನ್ಯಾಯಾಧೀಶರ ಕೇಡರ್‌ನಲ್ಲಿರುವ ನ್ಯಾಯಾಧೀಶರು. ಹೀಗಾಗಿ, ಹೈಕೋರ್ಟ್‌ಗೆ ಇರುವ ಮೊದಲ ಮೇಲ್ಮನವಿಗಳು ಮತ್ತು ನಗರ ಸಿವಿಲ್ ನ್ಯಾಯಾಧೀಶರು ಮೂಲ ನ್ಯಾಯವ್ಯಾಪ್ತಿಯನ್ನು ಚಲಾಯಿಸುವ ಆದೇಶಗಳು, ತೀರ್ಪುಗಳು ಮತ್ತು ತೀರ್ಪುಗಳಿಂದ ಉಂಟಾಗುವ ಮೇಲ್ಮನವಿಗಳನ್ನು ಸೀಮಿತ ಗೊಳಿಸಿದ್ದಕ್ಕಾಗಿ ಹೈಕೋರ್ಟ್ ತಿದ್ದುಪಡಿ ಕಾಯಿದೆಯನ್ನು ತಪ್ಪೆಂದು ಹೇಳಲಾಗು ವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ.

ಈತನಕ 5 ಲಕ್ಷ ರೂ. ಮೌಲ್ಯದ ಒಳಗಿನ ಅಸಲು ದಾವೆಗಳನ್ನು (ಒಎಸ್) ಸಿವಿಲ್ ಜಡ್ಜ್ ಮುನ್ಸೀಫ್ ಕೋರ್ಟ್‌ಗಳು ವಿಚಾರಣೆ ನಡೆಸುತ್ತಿದ್ದವು. 5 ಲಕ್ಷಕ್ಕೂ ಮೇಲ್ಪಟ್ಟಿದ್ದರೆ ಮಿತಿಗೆ ಒಳಪಡದಂತೆ ಹಿರಿಯ ವಿಭಾಗಕ್ಕೆ ಬರುತ್ತಿದ್ದವು. ಈ ಕೋರ್ಟ್‌ಗಳಲ್ಲಿ ನೀಡಲಾದ ಡಿಕ್ರಿಯನ್ನು ಪ್ರಶ್ನಿಸಲಾದ ಮೊದಲ ಮೇಲ್ಮನವಿ ಗಳಲ್ಲಿ 10 ಲಕ್ಷ ರೂ. ಮೌಲ್ಯದ ಒಳಗಿದ್ದರೆ ಜಿಲ್ಲಾ ನ್ಯಾಯಾಲಯಕ್ಕೆ ಹೋಗುತ್ತಿದ್ದವು. 10 ಲಕ್ಷ ರೂ. ಮೌಲ್ಯಕ್ಕೆ ಮೇಲ್ಪಟ್ಟಿದ್ದರೆ ನಿಯಮಿತ ಮೊದಲ ಮೇಲ್ಮನವಿಗಳಾಗಿ (ಆರ್‌ಎಫ್‌ಎ) ಹೈಕೋರ್ಟ್‌ಗೆ ಬರುತ್ತಿದ್ದವು. ಸರ್ಕಾರದ ತಿದ್ದುಪಡಿ ಮುಖೇನ ಇದನ್ನು ತಪ್ಪಿಸಿ 2007ರ ನಂತರದ ಎಲ್ಲಾ ಮೊದಲ ಅಪೀಲುಗಳನ್ನು ಜಿಲ್ಲಾ ನ್ಯಾಯಾಲಯ ವ್ಯಾಪ್ತಿಗೆ ನೀಡಲಾಗಿದೆ. ಈ ವಿಷಯದಲ್ಲಿ ಬೆಂಗಳೂರು ಸಿಟಿ ಸಿವಿಲ್ ಕೋರ್ಟ್‌ಗೆ ಅನ್ವಯ ಆಗದಂತೆ ಇದನ್ನು ಬದಲಾವಣೆ ಮಾಡಲಾಗಿದೆ. ತಿದ್ದುಪಡಿಯ ಅನುಸಾರ ಈಗ ಕಿರಿಯ ವಿಭಾಗಕ್ಕೆ 15 ಲಕ್ಷ ಮಿತಿ ವಿಧಿಸಲಾಗಿದೆ.




ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಯುಕೆಜಿ ಆರಂಭಿಸುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಸದಸ್ಯರು ಶುಕ್ರವಾರ ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿದರು.

# ಸೂಕ್ತ ಆದೇಶ ಹೊರಡಿಸುವಂತೆ ಜಿಬಿಎಗೆ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಪತ್ರ

## ವ್ಯಾಪಾರರಹಿತ ವಲಯವಾಗಿ ಪ್ರಮುಖ ರಸ್ತೆಗಳ ಪರಿವರ್ತನೆ

**ಬೆಂಗಳೂರು, ಜು.10:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಎಲ್ಲಾ ಪ್ರಮುಖ ಹಾಗೂ ಉಪ–ಪ್ರಮುಖ ರಸ್ತೆಗಳು ವ್ಯಾಪಾರರಹಿತ ವಲಯಗಳಾಗಿ ಪರಿವರ್ತನೆಗೊಳ್ಳುವ ಸಾಧ್ಯತೆಗಳಿವೆ. ನಗರ ಪೊಲೀಸ್ ಆಯುಕ್ತರು ಜಿಬಿಎಗೆ ಅಧಿಕೃತ ಪತ್ರ ಬರೆದು ಈ ಕುರಿತಂತೆ ಅಗತ್ಯ ಆಡಳಿತಾತ್ಮಕ ಆದೇಶ ಹೊರಡಿಸುವಂತೆ ಮನವಿ ಮಾಡಿದ್ದಾರೆ.



ಪಾದಚಾರಿ ಮಾರ್ಗಗಳ ಮೇಲಿನ ಅತಿಕ್ರಮಣ, ರಸ್ತೆಬದಿ ಅನಧಿಕೃತ ವ್ಯಾಪಾರ ಮತ್ತು ವಾಹನ ನಿಲುಗಡೆ ಯಿಂದ ಸಾರ್ವಜನಿಕರ ಸಂಚಾರಕ್ಕೆ ಉಂಟಾಗುತ್ತಿರುವ ತೊಂದರೆಗಳನ್ನು ಉಲ್ಲೇಖಿಸಿರುವ ಪೊಲೀಸ್ ಇಲಾಖೆ, ಸುಪ್ರೀಂಕೋರ್ಟ್ ನಿರ್ದೇಶನದಂತೆ ಪಾದಚಾರಿಗಳ ಸುರಕ್ಷತೆ ಹಾಗೂ ವಾಹನ ಸಂಚಾರ ಸುಗಮಗೊಳಿಸಲು ತುರ್ತು ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ತಿಳಿಸಿದೆ.

ಪ್ರಮುಖ ಹಾಗೂ ಉಪ–ಪ್ರಮುಖ ರಸ್ತೆಗಳಲ್ಲಿನ ಅತಿಕ್ರಮಣ ತೆರವು, ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಿರುವ ಪರಿಕರಗಳ ಸ್ಥಳಾಂತರ, ಅನಧಿಕೃತ ವಾಹನ ನಿಲುಗಡೆ ತೆರವು ಮತ್ತು ರಸ್ತೆಬದಿ ವ್ಯಾಪಾರವನ್ನು ಸಂಪೂರ್ಣ ನಿಷೇಧಿಸಲು ಸೂಚಿಸ ಲಾಗಿದೆ. ಅಗತ್ಯವಿರುವ ಕಡೆಗಳಲ್ಲಿ ಪಾದಚಾರಿ ಮಾರ್ಗಗಳನ್ನು ವಿಸ್ತರಿಸಿ ಸಾರ್ವಜನಿಕರಲ್ಲಿ ಜಾಗೃತಿ ಕಾರ್ಯ ಕ್ರಮಗಳನ್ನೂ ಹಮ್ಮಿಕೊಳ್ಳುವ ಪ್ರಸ್ತಾವವಿದೆ.

ಆದರೆ, ಬೀದಿಬದಿ ವ್ಯಾಪಾರಿಗಳ ಜೀವನೋಪಾಯಕ್ಕೆ ಧಕ್ಕೆಯಾಗದಂತೆ ಪ್ರಮುಖ ರಸ್ತೆಗಳಿಗೆ ಹೊಂದಿ ಕೊಂಡಿರುವ ಸೂಕ್ತ ಆಂತರಿಕ ರಸ್ತೆಗಳಲ್ಲಿ, 2014ರ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋ ಪಾಯ ಸಂರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರ ನಿಯಂತ್ರಣ) ಕಾಯ್ದೆಯ ನಿಯಮಾನುಸಾರ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಲು ಸೂಚಿಸಲಾಗಿದೆ.

ಪೊಲೀಸ್ ಇಲಾಖೆಯ ಸಹ ಯೋಗದೊಂದಿಗೆ ಪ್ರತಿ ನಗರ ಪಾಲಿಕೆ ತನ್ನ ವ್ಯಾಪ್ತಿಯ ಪ್ರಮುಖ ಹಾಗೂ ಉಪ–ಪ್ರಮುಖ ರಸ್ತೆಗಳನ್ನು ನಿಯಮಾನುಸಾರ ವ್ಯಾಪಾರ ರಹಿತ ವಲಯ ಎಂದು ಘೋಷಿಸುವ ಪ್ರಕ್ರಿಯೆ ಕೈಗೊಳ್ಳುವಂತೆ ಜಿಬಿಎ ಸೂಚನೆ ನೀಡಿದೆ. ಇದಕ್ಕಾಗಿ ಎಸ್‌ಓಪಿ, ಕರಡು ಸಾರ್ವಜನಿಕ ಅಧಿಸೂಚನೆ ಹಾಗೂ ಕಾನೂನು ಅಭಿಪ್ರಾಯದ ಆಧಾರದ ಮೇಲೆ ಮುಂದಿನ ಕ್ರಮ ಜರುಗಲಿದೆ ಎಂದು ತಿಳಿದುಬಂದಿದೆ.

# ಕೆಪಿಟಿಸಿಎಲ್‌ನಲ್ಲಿ ದೇಶದಲ್ಲೇ ಮೊದಲ ಬಾರಿಗೆ ಜಾಗತಿಕ 'ಝೀರೋ ಟ್ರಸ್ಟ್' ಸೈಬರ್ ಭದ್ರತಾ ವ್ಯವಸ್ಥೆ ಅಳವಡಿಕೆ

**ಬೆಂಗಳೂರು, ಜು.10 :** ರಾಜ್ಯದ ವಿದ್ಯುತ್ ಪ್ರಸರಣ ಜಾಲದ ಡಿಜಿಟಲ್ ಭದ್ರತೆಯನ್ನು ಮತ್ತಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಜಾಗತಿಕ ಮಟ್ಟದಲ್ಲಿ ಮಾನ್ಯತೆ ಪಡೆದಿರುವ ಝೀರೋ ಟ್ರಸ್ಟ್ ಸೈಬರ್ ಸೆಕ್ಯುರಿಟಿ ಆರ್ಕಿಟೆಕ್ಚರ್ ಅನ್ನು ಯಶಸ್ವಿಯಾಗಿ ಅಳವಡಿಸಿ ಕೊಂಡಿದೆ. ಇದರೊಂದಿಗೆ, ಈ ಅತ್ಯಾಧುನಿಕ ಸೈಬರ್ ಭದ್ರತಾ ವ್ಯವಸ್ಥೆಯನ್ನು ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ವಿದ್ಯುತ್ ಪ್ರಸರಣ ನಿಗಮ ಎಂಬ ಹೆಗ್ಗಳಿಕೆಗೆ ಕೆಪಿಟಿಸಿಎಲ್ ಪಾತ್ರವಾಗಿದೆ.

ರಾಜ್ಯದ ವಿದ್ಯುತ್ ಪ್ರಸರಣ ವ್ಯವಸ್ಥೆಯನ್ನು ಸೈಬರ್ ದಾಳಿಗಳಿಂದ ರಕ್ಷಿಸುವ ನಿಟ್ಟಿನಲ್ಲಿ ಈ ಸೈಬರ್ ಸೆಕ್ಯೂರಿಟಿಯನ್ನು ಅಳವಡಿಸಿಕೊಂಡಿದೆ. ಕೆಪಿಟಿಸಿಎಲ್‌ನ ಡಿಜಿಟಲ್ ರೂಪಾಂತರ ದಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ಕಾರ್ಯಾಚರಣೆ, ಎಂಜಿನಿಯರಿಂಗ್, ಹಣಕಾಸು ಹಾಗೂ ಆಡಳಿತ ವ್ಯವಸ್ಥೆಗಳನ್ನು ಅತ್ಯಾಧುನಿಕ ಭದ್ರತಾ ಚೌಕಟ್ಟಿನಡಿ ತರಲಿದೆ. ಪ್ರಸ್ತುತ ಕೆಪಿಟಿಸಿಎಲ್‌ನ ಕೇಂದ್ರ ಕಚೇರಿ, ಉಪಕೇಂದ್ರಗಳು, ಕಾರ್ಯಾ ಚರಣಾ ಕೇಂದ್ರಗಳು, ಕ್ಷೇತ್ರ ಮಟ್ಟದ ಕಚೇರಿಗಳು ಹಾಗೂ ದೂರದ ಕಾರ್ಯ ವ್ಯವಸ್ಥೆಯಲ್ಲಿ 3,000ಕ್ಕೂ ಹೆಚ್ಚು ಬಳಕೆದಾರರು ವಿವಿಧ ಡಿಜಿಟಲ್ ಸೇವೆಗಳನ್ನು ಬಳಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವೇಗವಾಗಿ ವಿಸ್ತರಿಸುತ್ತಿರುವ ಡಿಜಿಟಲ್ ಮೂಲಸೌಕರ್ಯವನ್ನು ಸುರಕ್ಷಿತಗೊಳಿಸಲು ಜಾಗತಿಕ ಮಟ್ಟದ ಹೊಸ ತಲೆಮಾರಿನ ಸೈಬರ್ ಭದ್ರತಾ ವ್ಯವಸ್ಥೆಯ ಅಗತ್ಯತೆ ಕಂಡುಬಂದಿತ್ತು.

ಸಾಂಪ್ರದಾಯಿಕ ನೆಟ್‌ವರ್ಕ್ ಭದ್ರತಾ ವ್ಯವಸ್ಥೆಗಳಿಗಿಂತ ಭಿನ್ನವಾಗಿ, ನಂಬಬೇಡ ಸದಾ ಪರಿಶೀಲಿಸಿಕೊ ಎಂಬ ತತ್ವದ ಮೇಲೆ ಕಾರ್ಯನಿರ್ವ ಹಿಸುವ ಝೀರೋ ಟ್ರಸ್ಟ್ ಮಾದರಿಯಲ್ಲಿ, ಪ್ರತಿಯೊಬ್ಬ ಬಳಕೆದಾರ, ಸಾಧನ ಹಾಗೂ ಆಕ್ಸೆಸ್ ವಿನಂತಿಯನ್ನು ನಿರಂತರವಾಗಿ ಗುರುತು, ಸಾಧನದ ಸ್ಥಿತಿ, ಬಳಕೆದಾರರಿಗೆ ನೀಡಲಾಗಿರುವ ಅನುಮತಿ ಮತ್ತು ಅದರಿಂದಾಗುವ ಅಪಾಯದ ಮಟ್ಟವನ್ನು ಪರಿಶೀಲಿಸಿದ ಬಳಿಕವೇ ಯಾವುದೇ ಅಪ್ಲಿಕೇಶನ್ ಅಥವಾ ವ್ಯವಸ್ಥೆಗೆ ಅಕ್ಸೆಸ್ ನೀಡಲಾ ಗುತ್ತದೆ.ಈ ಯೋಜನೆಯಡಿ ಕೆಪಿಟಿಸಿಎಲ್ ಸುಮಾರು 3,000 ಎಂಟರ್‌ಪ್ರೈಸ್ ಬಳಕೆದಾರರಿಗಾಗಿ ಜ್ಸ್ಕೆಲೆರ್ ಸಂಸ್ಥೆಯ ಕ್ಲೌಡ್ ಆಧಾರಿತ ಶೂನ್ಯ ನಂಬಿಕೆ ವಿನಿಮಯ ವೇದಿಕೆಯನ್ನು ಅಳವಡಿಸಿ ಕೊಂಡಿದೆ. ಈ ತಂತ್ರಜ್ಞಾನದ ಮೂಲಕ ಪಬ್ಲಿಕ್ ಇಂಟರ್‌ನೆಟ್‌ಗೆ ಪ್ರಮುಖ ಮಾಹಿತಿಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡದೆ, ಅಧಿಕೃತ ಬಳಕೆದಾರರಿಗೆ ಮಾತ್ರ ಸುರಕ್ಷಿತ ಹಾಗೂ ಸುಲಭ ಪ್ರವೇಶವನ್ನು ಒದಗಿಸಲಾಗುತ್ತದೆ. ಇದರಿಂದ ಸಾಂಪ್ರದಾಯಿಕ ವಿಪಿಎನ್ ಆಧಾರಿತ ವ್ಯವಸ್ಥೆಗಳಲ್ಲಿ ಕಂಡುಬರುವ ಭದ್ರತಾ ಲೋಪಗಳನ್ನು ಪರಿಣಾಮಕಾರಿಯಾಗಿ ತಡೆಯಲು ಸಾಧ್ಯವಾಗಲಿದೆ.

ಈ ಹೊಸ ಸೈಬರ್ ಭದ್ರತಾ ವ್ಯವಸ್ಥೆಯು ಫಿಶಿಂಗ್, ರ್‍ಯಾನ್ಸಮ್ ವೇರ್, ಮಾಲ್‌ವೇರ್, ಪಾಸ್‌ವರ್ಡ್ ಕಳವು, ಅನಧಿಕೃತ ಅಕ್ಸೆಸ್ ಹಾಗೂ ದತ್ತಾಂಶ ಸೋರಿಕೆ ಯಂತಹ ಸೈಬರ್ ಅಪಾಯಗಳಿಂದ ಕೆಪಿಟಿಸಿಎಲ್‌ನ ಪ್ರಮುಖ ಮೂಲಸೌಕರ್ಯಗಳಿಗೆ ರಕ್ಷಣೆ ಒದಗಿಸುತ್ತದೆ. ನಿರಂತರ ದೃಢೀಕರಣ, ಕನಿಷ್ಠ ಪ್ರವೇಶ ಹಕ್ಕು ಹಾಗೂ ಕೇಂದ್ರೀಕೃತ ಭದ್ರತಾ ಮೇಲ್ವಿಚಾರಣೆಯ ಮೂಲಕ ಸಂಭಾವ್ಯ ಸೈಬರ್ ಬೆದರಿಕೆಗಳನ್ನು ತ್ವರಿತವಾಗಿ ಪತ್ತೆಹಚ್ಚಿ ಪರಿಣಾಮಕಾರಿಯಾಗಿ ನಿರ್ವಹಿಸಲು ಈ ವ್ಯವಸ್ಥೆ ನೆರವಾಗಲಿದೆ.



ಅಯೋಧ್ಯೆ ರಾಮಮಂದಿರದಲ್ಲಿ ಭಕ್ತರ ಕೋಟ್ಯಂತರ ರೂಪಾಯಿ ದೇಣಿಗೆ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಬೆಂಗಳೂರಿನ ಕಾಂಗ್ರೆಸ್ ಭವನದಲ್ಲಿ ಪ್ರತಿಭಟನೆ ನಡೆಸಿದರು.

## ಜಾತಿಗಣತಿ ಹೆಸರಿನಲ್ಲಿ ಓಟಿನ ರಾಜಕೀಯ,

# ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರಮೋದ ಮಧ್ವರಾಜ್ ಕಿಡಿ

**ಕಲಬುರಗಿ, ಜು. 10:** ಕರ್ನಾಟಕ ಸರ್ಕಾರ ಜಾತಿ ಜನಗಣತಿಯ ಹೆಸರಿನಲ್ಲಿ ಓಟಿನ ರಾಜಕೀಯ ಬಿಟ್ಟರೆ ಮತ್ತೇನು ಮಾಡಿಲ್ಲ. ಕೇಂದ್ರ ಸರ್ಕಾರವೇ ಅಧಿಕೃತವಾಗಿ ಜಾತಿ ಜನಗಣತಿಯ ಸಿದ್ಧತೆ, ಪ್ರಕ್ರಿಯೆ ಆರಂಭಿಸಿದ್ದು, ಆ ಮೂಲಕವೇ ಕರ್ನಾಟಕದ ಜನತೆ ಸಾಮಾಜಿಕ ನ್ಯಾಯ ಪಡೆದುಕೊಳ್ಳಬೇಕಾಗಿದೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಹಿರಿಯ ಮುಖಂಡ ಪ್ರಮೋದ್ ಮಧ್ವರಾಜ್ ಹೇಳಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಬದ್ಧತೆಯ ರಾಜಕಾರಣದ ಕೊರತೆಯಿಂದ ಹಿಂದುಳಿದ ವರ್ಗಗಳಿಗೆ ಅನ್ಯಾಯ ಆಗಿದೆ. ಜಾತಿ ಜನಗಣತಿಯ ಹೆಸರಿನಲ್ಲಿ ಲೂಟಿ ಮಾಡಲಾಗುತ್ತಿದೆ ಎಂದು ದೂರಿದರು.

2013ರಲ್ಲಿ ಮೂಲ ಕಾಂಗ್ರೆಸ್ಸಿಗರನ್ನು ಮೂಲೆಗೆ ಹಾಕಿ ಅಧಿಕಾರದ ಚುಕ್ಕಾಣಿ ಹಿಡಿದ ಸಿದ್ಧರಾಮಯ್ಯನವರು ಜಾತಿ ಜನಗಣತಿಯ ವಿಷಯದಲ್ಲಿ ಬರೀ ಮಾತಿನ ಶೂರರಾದರು, ಓಬಿಸಿ ಸಮುದಾಯಗಳ ಅಶೋತ್ತರಗಳಿಗೆ ಕವಡೆ ಕಾಸಿನ ಕಿಮ್ಮತ್ತು ಸಿಗದಂತೆ ಮಾಡಿದರು. 600 ಕೋಟಿ ರೂ,ಗಳ ತೆರಿಗೆ ಹಣ ಮುಳುಗಿಸಿ ಕೈತೊಳೆದು ಕೊಂಡಿದ್ದಾರೆ. 2014ರಲ್ಲಿ ಕಾಂತರಾಜ್ ಆಯೋಗಕ್ಕೆ ಜಾತಿ ಜನಗಣತಿ ಜವಾಬ್ದಾರಿ ಕೊಡಲಾಯಿತು. ಆನಂತರ ಜಯಪ್ರಕಾಶ್ ಹೆಗ್ಡೆ ಆಯೋಗಕ್ಕೆ ವಹಿಸ ಲಾಯಿತು. ಕೊನೆಗೆ 10 ವರ್ಷದ ನಂತರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹೆಸರಿನ ಜಾತಿ ಜನಗಣತಿಯ ವರದಿ ಮೂಲೆ ಸೇರಿತು ಎಂದು ಅವರು ಆಕ್ರೋಶ ಹೊರಹಾಕಿದರು.



ಬಿಹಾರದ ನಿತೀಶ್ ಕುಮಾರ್, ತೆಲಂಗಾಣದ ರೇವಂತ ರೆಡ್ಡಿ ಅವರು ಒಂದು ವರ್ಷದ ಕಾಲಮಿತಿಯಲ್ಲಿ ಮಾಡಿ ಮುಗಿಸಿದ ಕೆಲಸವನ್ನು, ಸಿದ್ಧರಾಮಯ್ಯನವರು 10 ವರ್ಷ ಕಾಲಹರಣ ಮಾಡಿ ಓಬಿಸಿ ಸಮುದಾಯಗಳನ್ನು ದಿಕ್ಕು ತಪ್ಪಿಸಿದ್ದಾರೆ ಎಂದು ರೋಪಿಸಿದ ಅವರು, ಕಳೆದ ವರ್ಷ ಸಿದ್ಧರಾಮಯ್ಯನವರು ಮತ್ತೊಂದು ಜಾತಿಗಣತಿಗೆ ಮುಂದಾದರು ಜೂನ್ 15 2025ರಂದು ಸಚಿವ ಸಂಪುಟ ಸಭೆಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಮಧುಸೂದನ್ ನಾಯಕ್ ನೇತೃತ್ವದಲ್ಲಿ ಮತ್ತೊಂದು ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯನ್ನು ಘೋಷಿಸಿದರು. ತಂತ್ರಜ್ಞಾನ ಬಳಸಿ ಸಮೀಕ್ಷೆ ಮಾಡಲಾಗುತ್ತಿದ್ದು ಮೂರೇ ತಿಂಗಳಲ್ಲಿ ವರದಿ ಸಿದ್ಧವಾಗುತ್ತದೆ ಎಂದು ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯ ಘೋಷಿಸಿದ್ದರು ಎಂದು ಅವರು ಹೇಳಿದರು.

3 ತಿಂಗಳಲ್ಲ, 6 ತಿಂಗಳಲ್ಲ ಒಂದು ವರ್ಷವಾದರೂ ಜಾತಿ ಜನಗಣತಿ ಪ್ರಕ್ರಿಯೆ ಮುಗಿಯುತ್ತಿಲ್ಲ. ಸಮೀಕ್ಷೆ ಶುರುವಾದದ್ದೆ ಸೆಪ್ಟೆಂಬರ್ 22ಕ್ಕೆ. ಆಗಲೇ ಮೊದಲ ಮೂರು ತಿಂಗಳು ಮುಗಿದಿತ್ತು. ನವಂಬರ್ 10ಕ್ಕೆ ಸಮೀಕ್ಷೆ ಮುಗಿದರೂ ಆರು ತಿಂಗಳಾದರೂ ಸಮೀಕ್ಷೆಯ ವರದಿ ಪೂರ್ತಿಯಾಗಿರಲಿಲ್ಲ. ಮೇ 26ಕ್ಕೆ ಸಿದ್ಧರಾಮಯ್ಯನವರಿಗೆ ರಾಜೀನಾಮೆ ಕೊಡಲು ಕಾಂಗ್ರೆಸ್ ಹೈಕಮಾಂಡ್ ಆದೇಶಿಸಿತು.

ಮರುದಿನ ಮೇ 27ರಂದು ಸಿದ್ಧರಾಮಯ್ಯ ತರಾತುರಿಯಲ್ಲಿ ವರದಿ ಸ್ವೀಕರಿಸಿದ ಶಾಸ್ತ್ರ ಮಾಡಿದರು. ಬದ್ಧತೆ ಇದ್ದಿದ್ದರೆ ಆಯೋಗ ಚುರುಕಾಗಿ ಕಾರ್ಯ ನಿರ್ವಹಿಸುವಂತೆ ಮಾಡಿ, ಶಿಫಾರಸ್ಸುಗಳನ್ನು ಜಾರಿಗೆ ತರಲು ಮುಂದಾಗ ಬೇಕಿತ್ತಲ್ಲವೇ ಎಂದು ಅವರು ಖಾರವಾಗಿ ಪ್ರಶ್ನಿಸಿದರು. ಪತ್ರಿಕೆಗಳಲ್ಲಿ ಸೋರಿದ ವರದಿಗಳು ಬಂದವು. ಜೂನ್ 16ರಂದು ಜಾತಿ ಜನಗಣತಿಯ ವಿಷಯ ಹೈಕೋರ್ಟ್ ಮೆಟ್ಟಿಲು ಏರಿದೆ. ಈಗ ಆಗಸ್ಟ್ 20ಕ್ಕೆ ಪ್ರಕರಣ ಮುಂದೆ ಹೋಗಿದೆ. ಕರ್ನಾಟಕ ಸರ್ಕಾರ ಕಾನೂನು ಹೋರಾಟದಲ್ಲಿಯೂ ಸರಿಯಾದ ಸಿದ್ಧತೆ ಮಾಡದೆ ವಿಫಲವಾಗಿದೆ.

ಹೊಸ ಮುಖ್ಯಮಂತ್ರಿಗಳು ಜಾತಿ ಜನಗಣತಿಯ ಬಗ್ಗೆ ಒಂದು ಶಬ್ದವನ್ನು ಮಾತನಾಡುತ್ತಿಲ್ಲ. ಕಾಂಗ್ರೆಸ್ಸಿನಲ್ಲಿರುವ ಹಿಂದುಳಿದ ವರ್ಗಗಳ ನಾಯಕರಿಗೆ ಮಂತ್ರಿ ಸ್ಥಾನ, ಖಾತೆಗಳದ್ದೆ ಚಿಂತೆಯಾಗಿದೆ ಎಂದು ಅವರು ಟೀಕಿಸಿದರು.

ಫೆಬ್ರವರಿ ತಿಂಗಳ ರಾಜ್ಯಪಾಲರ ಭಾಷಣದಲ್ಲಿ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯ ಬಗ್ಗೆ ಒಂದು ಸಾಲೂ ಇರಲಿಲ್ಲ, ಮುಖ್ಯಮಂತ್ರಿಗಳ ಬಜೆಟ್ ಭಾಷಣದಲ್ಲಿಯೂ ಉಲ್ಲೇಖವಿಲ್ಲ. ಸರ್ಕಾರದ ನಿರ್ಲಕ್ಷ್ಯತೆಗೆ ಮತ್ತಾವ ಸಾಕ್ಷಿ ಬೇಕು? ಕರ್ನಾಟಕ ಸರ್ಕಾರ ಜಾತಿ ಜನಗಣತಿಯ ಹೆಸರಿನಲ್ಲಿ ಓಟಿನ ರಾಜಕೀಯ ಬಿಟ್ಟರೆ ಮತ್ತೇನು ಮಾಡಿಲ್ಲ. ಕೇಂದ್ರ ಸರ್ಕಾರವೇ ಅಧಿಕೃತವಾಗಿ ಜಾತಿ ಜನಗಣತಿಯ ಸಿದ್ಧತೆ, ಪ್ರಕ್ರಿಯೆ ಆರಂಭಿಸಿದ್ದು, ಆಮೂಲಕವೇ ಕರ್ನಾಟಕದ ಜನತೆ ಸಾಮಾಜಿಕ ನ್ಯಾಯ ಪಡೆದುಕೊಳ್ಳಬೇಕಾಗಿದೆ. ಕರ್ನಾಟಕದ ಜನತೆ ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗಗಳು ರೋಸಿಹೋಗಿ ರೊಚ್ಚಿಗೆದ್ದು ಬೀದಿಗಿಳಿಯುವ ದಿನ ದೂರವಿಲ್ಲ ಎಂದು ಅವರು ಎಚ್ಚರಿಸಿದರು.

# ಒಕ್ಕಲುತನ ಉಳಿದರಷ್ಟೇ ದೇಶ ಸುಭಿಕ್ಷ ಮಾಜಿ ಸಂಸದ ವಿರೂಪಾಕ್ಷಪ್ಪ ಕರೆ




**ರಾಯಚೂರು, ಜು. 10:** ಅನ್ನ ನೀಡುವ ರೈತನ ಕೆಲಸ ದೇಶಕ್ಕೆ ಜೀವಾಳವಾಗಿದ್ದು, ಒಕ್ಕಲುತನ ಉಳಿದರೆ ಮಾತ್ರ ದೇಶಕ್ಕೆ ಸುಭಿಕ್ಷೆ ದೊರೆಯಲಿದೆ ಎಂದು ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಹೇಳಿದರು.

ಜಿಲ್ಲೆಯ ಸಿಂಧನೂರಿನ ಎಪಿಎಂಸಿ ದನದ ಹಳೇ ಸಂತೆ ಮಾರುಕಟ್ಟೆ ಜಾಗದಲ್ಲಿ ತಾಲೂಕು ರೈತ ಕಾರಹುಣ್ಣಿಮೆ ಸಾಂಸ್ಕೃತಿಕ ಕ್ರೀಡಾ ಉತ್ಸವ ಟ್ರಸ್ಟ್ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಹಮ್ಮಿಕೊಂಡಿರುವ ಜಿಲ್ಲಾ ಮಟ್ಟದ ಮುಂಗಾರು ಕಾರಹುಣ್ಣಿಮೆ ಸಂಭ್ರಮ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ದೇಶದ ಆರ್ಥಿಕ ವ್ಯವಸ್ಥೆ ಕೃಷಿ ಮೇಲೆ ಅವಲಂಬಿತವಾಗಿದೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಒದಗಿಸುವುದು ಸೇರಿ ಗ್ರಾಮೀಣ ಭಾಗದ ಆರ್ಥಿಕತೆ ಜೀವಂತವಾಗಿಡುವಲ್ಲಿ ಒಕ್ಕಲುತನದ ಪಾತ್ರ ದೊಡ್ಡದಿದೆ. ಒಕ್ಕಲುತನ ಉಳಿದರೆ ಮಾತ್ರ ಉತ್ತಮ ಬದುಕು ನಡೆಸಲು ಸಾಧ್ಯ. ಮಣ್ಣು, ಹೊನ್ನು ತಿಂದು ಬದುಕಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಬಸವರಾಜ ನಾಡಗೌಡ ಬಾದರ್ಲಿ ಮಾತನಾಡಿ, ಹಬ್ಬಗಳು, ಸಂಪ್ರದಾಯಗಳು ಮತ್ತು ಜನಪದ ಸಾಹಿತ್ಯ ಮಣ್ಣು ಮತ್ತು ಕೃಷಿ ಕಾಯಕದ ಸುತ್ತಲೂ ಹೆಣೆದುಕೊಂಡಿವೆ. ಕೃಷಿ ಉಳಿದರೆ ನಮ್ಮ ಸಂಸ್ಕೃತಿ ಉಳಿಯಲಿದೆ ಎಂದರು.

## ಕಲಬುರಗಿಯಲ್ಲಿ ಆ.2ರಂದು ಆಯೋಜನೆ

# ವಿಭಾಗ ಮಟ್ಟದ ದಾಸಸಾಹಿತ್ಯ ಸಮ್ಮೇಳನ



**ಕಲಬುರಗಿ, ಜು. 10:** ಕನ್ನಡ ಸಾಹಿತ್ಯ ಪರಿಷತ್ ದಕ್ಷಿಣ ವಲಯದ ವತಿಯಿಂದ ಆಗಸ್ಟ್ 2 ರಂದು ನಗರದ ಕನ್ನಡ ಭವನದಲ್ಲಿ ಒಂದು ದಿನದ ವಿಭಾಗದ ನಾಲ್ಕನೇ ದಾಸ ಸಾಹಿತ್ಯ ಸಮ್ಮೇಳನ ಏರ್ಪಡಿಸಲು ನಿರ್ಧರಿಸಲಾಗಿದೆ ಎಂದು ಪರಿಷತ್ ದಕ್ಷಿಣ ವಲಯ ಅಧ್ಯಕ್ಷ ರವಿಕುಮಾರ್ ಶಹಾಪುರಕರ್ ತಿಳಿಸಿದರು.

ಪರಿಷತ್ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಿಂದಿನ ದಾಸ ಸಾಹಿತ್ಯ ಸಮ್ಮೇಳನಗಳು ಅರ್ಥಪೂರ್ಣವಾಗಿ ಜರುಗಿದ್ದು, ಇಂದಿನ ಹೊಸ ಪೀಳಿಗೆಗೆ ದಾಸ ಸಾಹಿತ್ಯದ ವೈಚಾರಿಕತೆ ಮತ್ತು ಶ್ರೀಮಂತ ಪರಂಪರೆಯ ಬಗ್ಗೆ ಅರಿವು ಮೂಡಿಸುವ ಕಾರ್ಯ ಈ ಸಮ್ಮೇಳನಗಳು ಮಾಡಿವೆ. ಈ ಸಮ್ಮೇಳನ ಇನ್ನಷ್ಟು ಅರ್ಥಪೂರ್ಣವಾಗಿ ನಡೆಸಲು ಸಕಲ ಸಿದ್ಧತೆಗಳು ಮಾಡಿ ಕೊಳ್ಳಲಾಗುತ್ತಿದೆ.

ಇನ್ನೆರಡು ದಿನಗಳಲ್ಲಿ ಓರ್ವ ದಾಸ ಸಾಹಿತಿ ಯೊಬ್ಬರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುವುದು. ಜತೆಗೆ ಸ್ವಾಗತ ಸಮಿತಿಯ ರಚನೆಯೂ ಸಹ ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು ಎಂದರು.

ಪರಿಷತ್ ಜಿಲ್ಲಾ ಅಧ್ಯಕ್ಷ ವಿಜಯ ಕುಮಾರ್ ಪಾಟೀಲ್ ತೇಗಲತಿಪ್ಪಿ ಅವರು ಮಾತನಾಡಿ, ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ಇವೆರಡು ಸಮಾಜದ ಎರಡು ಕಣ್ಣುಗಳಿದ್ದಂತೆ. ಸಮಾಜ ಪರಿವರ್ತನೆಯ ಉದ್ದೇಶ ಇವರದ್ದಾಗಿತ್ತು. ಸಾಮಾಜಿಕ ಚಿಂತನೆ, ವೈಚಾರಿಕ ದೃಷ್ಟಿಕೋನದ ಮೂಲಕ ಸಮಾಜವನ್ನು ತಿದ್ದಲು ಪ್ರಯತ್ನಿಸಿದರು. ದಾಸರು ದಾಸರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ದಾಸರು ಕೀರ್ತನೆಗಳ ಮೂಲಕ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ ಮಹಾತ್ಮರನ್ನು ಒಂದು ಜಾತಿಗೆ ಸೀಮಿತಗೊಳಿಸದೆ ಅವರನ್ನು ಮನುಕುಲದ ಉದ್ಧಾರಕರಾಗಿದ್ದಾರೆ ಎಂದರು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಸದಸ್ಯರ ಸರ್ವ ಸದಸ್ಯರ ಸಮಾವೇಶವೊಂದನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆಸಲು ಚಿಂತನೆ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಇದೇ ಮೊದಲ ಬಾರಿಗೆ ನಡೆಸಲು ಉದ್ದೇಶಿಸಲಾಗಿರುವ ಈ ಸರ್ವ ಸದಸ್ಯರ ಸಮಾವೇಶದಲ್ಲಿ ಕಳೆದ ನಾಲ್ಕೂವರೆ ವರ್ಷಗಳಿಂದ ಇಲ್ಲಿಯವರೆಗೆ ರೂಪಿಸಿದ ವಿವಿಧ ಕಾರ್ಯಕ್ರಮಗಳು, ಸಮ್ಮೇಳನಗಳ ಜತೆಗೆ ಖರ್ಚು ವೆಚ್ಚಗಳ ವಿವರಣೆಯನ್ನು ನೀಡಲಾಗುವುದು. ಸಾರ್ವಜನಿಕವಾಗಿ ಕಾರ್ಯಕ್ರಮಗಳ ಪಟ್ಟಿಯ ಜತೆಗೆ ಲೆಕ್ಕ ಪತ್ರಗಳ ಪಟ್ಟಿಯನ್ನು ಬಿಡುಗಡೆಗೊಳಿಸುತ್ತಿರುವುದು ಇದೇ ಮೊದಲು ಎಂದು ಅವರು ಹೇಳಿದರು.

# ಪ್ರಭಾತ ಕಲಾವಿದರಿಂದ ಸಂಗೀತ ನೃತ್ಯರೂಪಕ "ರಾಮ ಪ್ರತೀಕ್ಷೆ" ಹಾಗೂ "ರಾಮ ಭಕ್ತಿಸುಧಾ" ಪ್ರದರ್ಶನ



**ಬೆಂಗಳೂರು, ಜು.10;** ಸಮಾಜ ಸೇವಕ ಸಕಲ ನರಸಿಂಹಲು ಚೆಟ್ಟಿ ಅವರ ಜನ್ಮ ಶತಮಾನೋತ್ಸವ ಹಾಗೂ ಮೂರನೇ ಆರಾಧನೆ ಮಹೋತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸಭಾಂಗಣ ದಲ್ಲಿ ಶತಮಾನೋತ್ಸವದ ಪ್ರಮುಖ ಆಕರ್ಷಣೆಯಾಗಿ ಪ್ರಭಾತ ಕಲಾವಿದರು ಅಭಿನಯಿಸಿದ ಅದ್ಭುತ ಸಂಗೀತ–ನೃತ್ಯ ರೂಪಕ "ರಾಮ ಪ್ರತೀಕ್ಷೆ" ಹಾಗೂ "ರಾಮ ಭಕ್ತಿಸುಧಾ". ಸಂಗೀತ, ವಾಚನ, ನೃತ್ಯ ಮತ್ತು ನಾಟಕದ ಮನೋಜ್ಞ ಸಂಯೋಜನೆಯ ಮೂಲಕ ಸಂಪೂರ್ಣ ರಾಮಾಯಣ ವನ್ನು ಒಂದೇ ನಿರಂತರ ಪ್ರದರ್ಶನದಲ್ಲಿ ಮನಮೋಹಕವಾಗಿ ಅನಾವರಣ ಗೊಳಿಸಿದರು.

ಸಮಾಜಸೇವಕ, ಧಾರ್ಮಿಕ ಚಿಂತಕ ಹಾಗೂ ಶ್ರೀರಾಮನ ಅನನ್ಯ ಭಕ್ತರಾಗಿದ್ದ ನರಸಿಂಹಲು ಚೆಟ್ಟಿ ಅವರು ತಮ್ಮ ಜೀವನವನ್ನು ಸಮಾಜದ ಸೇವೆಗೆ ಸಮರ್ಪಿಸಿಕೊಂಡು, ಸತ್ಯ, ಧರ್ಮ, ವಿನಯ ಮತ್ತು ನಿಸ್ವಾರ್ಥ ಸೇವೆಯ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿ ಕೊಂಡಿದ್ದರು.

ಈ ಪುಣ್ಯ ಸಮಾರಂಭಕ್ಕೆ ಚಿನ್ಮಯ ಮಿಷನ್ ಕರ್ನಾಟಕದ ಅಧ್ಯಕ್ಷ ಸ್ವಾಮಿ ಬ್ರಹ್ಮಾನಂದಜೀ ಆಶೀರ್ವಚನ ನೀಡಿ ಕಾರ್ಯಕ್ರಮಕ್ಕೆ ಮೆರುಗು ತಂದರು. ನರಸಿಂಹಲು ಚೆಟ್ಟಿಯವರ ವ್ಯಕ್ತಿತ್ವವನ್ನು ಸ್ಮರಿಸಿದ ಸ್ವಾಮೀಜಿಯವರು, ಅವರ ಜೀವನವು ರಾಮಾಯಣದ ಶಾಶ್ವತ ಮೌಲ್ಯಗಳ ಜೀವಂತ ಪ್ರತಿಬಿಂಬವಾಗಿತ್ತು. ಶ್ರೀರಾಮನನ್ನು ಕೇವಲ ಆರಾಧಿಸುವು ದಷ್ಟೇ ಅಲ್ಲದೆ, ಧರ್ಮ, ಸತ್ಯನಿಷ್ಠೆ ಮತ್ತು ಆದರ್ಶ ಜೀವನವನ್ನು ಅಚಲವಾದ ನಂಬಿಕೆ ಹಾಗೂ ಪ್ರಾಮಾಣಿಕತೆಯಿಂದ ಆಚರಿಸಿದ ಮಹಾನ್ ಚೇತನ ಎಂದು ಬಣ್ಣಿಸಿದರು.

ಈ ಕಲಾರೂಪದಲ್ಲಿ ಸೀತಾ ಕಲ್ಯಾಣ, ಶ್ರೀರಾಮರ ವನವಾಸ, ಶಬರಿಯ ಭಕ್ತಿ, ಸುಗ್ರೀವನ ಸ್ನೇಹ, ಹನುಮಂತರ ಪರಾಕ್ರಮ, ವಿಭೀಷಣನ ಶರಣಾಗತಿ, ರಾಮಸೇತು ನಿರ್ಮಾಣ, ರಾವಣನ ವಿರುದ್ಧದ ಮಹಾಯುದ್ಧ ಹಾಗೂ ಅಂತಿಮವಾಗಿ ಅಧರ್ಮದ ಮೇಲೆ ಧರ್ಮದ ವಿಜಯ ಮುಂತಾದ ರಾಮಾಯಣದ ಅಮರ ಪ್ರಸಂಗಗಳನ್ನು ಅತ್ಯಂತ ಭಾವಪೂರ್ಣವಾಗಿ ಚಿತ್ರಿಸಲಾಯಿತು. ಕಲಾವಿದರ ಅದ್ಭುತ ಅಭಿನಯ, ಸಂಗೀತದ ಮಾಧುರ್ಯ ಮತ್ತು ಭಕ್ತಿಯ ಪರಿಮಳವು ಆರಂಭ ದಿಂದ ಅಂತ್ಯದವರೆಗೆ ನೆರೆದಿದ್ದ ಪ್ರೇಕ್ಷಕರನ್ನು ಮಂತ್ರಮುಗ್ಧ ರನ್ನಾಗಿಸಿತು.

ಸಾವಿರಕ್ಕೂ ಹೆಚ್ಚು ಭಕ್ತರು ಹಾಗೂ ಗಣ್ಯರಿಂದ ಕಿಕ್ಕಿರಿದು ತುಂಬಿದ್ದ ಆಧ್ಯಾತ್ಮಿಕತೆ ಮತ್ತು ಭಾರತೀಯ ಸಂಸ್ಕೃತಿಯ ಅಪೂರ್ವ ಸಂಗಮಕ್ಕೆ ಸಾಕ್ಷಿಯಾಯಿತು. ಈ ಅದ್ಭುತ ಕಾರ್ಯಕ್ರಮವು ಶ್ರೀರಾಮನ ಆದರ್ಶಗಳಿಗೆ ತಮ್ಮ ಜೀವನವನ್ನೇ ಅರ್ಪಿಸಿದ್ದ ಸಕಲ ನರಸಿಂಹಲು ಚೆಟ್ಟಿಯವರಿಗೆ ಸಲ್ಲಿಸಿದ ಅತ್ಯಂತ ಅರ್ಥಪೂರ್ಣ ನಮನವಾಗಿತ್ತು.

ಈ ಸಂದರ್ಭದಲ್ಲಿ ಪೂಜ್ಯ ಸಕಲ ನರಸಿಂಹಲು ಚೆಟ್ಟಿ ಅವರ ಜೀವನಚರಿತ್ರೆ ಕೃತಿ ಹಾಗೂ ಸಿ.ಎ. ಡಾ. ವಿಷ್ಣು ಭರತ್ ಆಲಂಪಳ್ಳಿ ಅವರ ರಚಿತ 54ನೇ ಕೃತಿ "ನಾವು ಈ ಶಾಶ್ವತ ಜಗತ್ತಿನಲ್ಲಿ ತಾತ್ಕಾಲಿಕರು" ಎಂಬ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಕಲ ನರಸಿಂಹಲು ಚೆಟ್ಟಿ ಅವರ ಪುತ್ರರಾದ ಶರತ್ ಕುಮಾರ್ ಮತ್ತು ಮುರಳಿ ಮೋಹನ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

# ಸ್ವಯಂಪ್ರೇರಿತ ಅಂಗದಾನ ನೋಂದಣಿ ಕೇಂದ್ರಕ್ಕೆ ಸಚಿವ ಖಾದರ್ ಚಾಲನೆ



ಬೀದರ್‌ನ ಸೇಡಂಕರ್ ಆಸ್ಪತ್ರೆಯಲ್ಲಿ ಸ್ವಯಂಪ್ರೇರಿತ ಅಂಗದಾನ ಜಾಗೃತಿ ಮತ್ತು ನೋಂದಣಿ ಕೇಂದ್ರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಉದ್ಘಾಟಿಸಿದರು.

ಬೀದರ್, ಜು. 8: ನಗರದ ಸೇಡಂಕರ್ ಆಸ್ಪತ್ರೆಯಲ್ಲಿ ಸ್ವಯಂ ಪ್ರೇರಿತ ಅಂಗದಾನ ಜಾಗೃತಿ ಮತ್ತು ನೋಂದಣಿ ಕೇಂದ್ರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಉದ್ಘಾಟಿಸಿದರು.

ಭಾರತದಲ್ಲಿ ಮೂತ್ರಪಿಂಡ, ಯಕೃತ್ತು, ಹೃದಯ, ಶ್ವಾಸಕೋಶ, ಮೇದೋಜೀರಕ ಗ್ರಂಥಿ ಹಾಗೂ ಕರುಳಿನ ಕಸಿ ಕಾನೂನುಬದ್ಧವಾಗಿ ನಡೆಯುತ್ತಿದೆ. ಅಂಗಾಂಗಗಳ ಹಂಚಿಕೆಯನ್ನು ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಂಗಾಂಗ ಕಸಿ ಸಂಸ್ಥೆಗಳು ವೈದ್ಯಕೀಯ ಆದ್ಯತೆ, ರಕ್ತದ ಗುಂಪು, ಹೊಂದಾಣಿಕೆ ಹಾಗೂ ಕಾಯುವ ಅವಧಿಯ ಆಧಾರದ ಮೇಲೆ ನಡೆಸುತ್ತಿವೆ. ಇದರ ಬಗ್ಗೆ ಜಾಗೃತಿ ಹಾಗೂ ನೋಂದಣಿಗೆ ಕೇಂದ್ರ ಆರಂಭಿಸಿರುವುದು ಉತ್ತಮ ಕೆಲಸ ಎಂದು ಖಾದರ್ ಹೇಳಿದರು.

# ದಲಿತ ಮಹಿಳೆ ಶಾಸಕಿಯಾಗಿದ್ದು ತಪ್ಪಾ: ನಯನಾ ಮೋಟಮ್ಮ

**ಮೂಡಿಗೆರೆ ಕಾಂಗ್ರೆಸ್‌ನಲ್ಲಿ ಆಂತರಿಕ ಕಲಹ; ನಯನಾ ನಿಯೋಗದಿಂದ ವರಿಷ್ಠರ ಭೇಟಿ**

**ಮೂಡಿಗೆರೆ, ಜು.10:** ಮಹಿಳೆಯಾಗಿ, ದಲಿತ ಶಾಸಕಿಯಾಗಿ ಆಯ್ಕೆಯಾಗಿರುವುದು ತಪ್ಪು ಎನ್ನುವಂತೆ ಕೆಲ ಸ್ವಕ್ಷೇತ್ರದ, ಸ್ವಪಕ್ಷೀಯ ಮುಖಂಡರು ನನ್ನ ವಿರುದ್ಧ ಇಲ್ಲಸಲ್ಲದ ಹೇಳಿಕೆಗಳನ್ನು, ಆರೋಪಗಳನ್ನು ಮಾಡುತ್ತಿದ್ದಾರೆ. ಇದನ್ನು ವರಿಷ್ಠರ ಗಮನಕ್ಕೆ ತರಲಾಗಿದೆ ಎಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಶಾಸಕಿ ನಯನ ಮೋಟಮ್ಮ ಸ್ಪಷ್ಟಪಡಿಸಿದರು.

ಮಾಧ್ಯಮಗಳೊಂದಿಗೆ, ಈ ಹಿಂದೆಯಿಂದಲೂ ನನ್ನ ವಿರುದ್ಧ ಸ್ವಪಕ್ಷೀಯ ಮುಖಂಡರು ಕುತಂತ್ರ ನಡೆಸುತ್ತಿದ್ದು, ಕೆಲ ಬಾರಿ ವರಿಷ್ಠರಿಗೆ ದೂರನ್ನು ಸಹ ನೀಡಿದ್ದಾರೆ. 2018ರ ಚುನಾವಣೆ ಮತ್ತು ಅದರ ಹಿಂದಿನ ಹಲವು ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಪ್ರಭಾವ ಕಡಿಮೆಯಾಗಿತ್ತು. ಆದರೆ ನಾನು ನಿರಂತರ ಹೋರಾಟ ನಡೆಸಿ ಬೂತ್ ಮಟ್ಟದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತಗೆದುಕೊಂಡು ಜಯಭೇರಿ ಬಾರಿಸುವಂತೆ ಮಾಡಿದ್ದೇನೆ ಎಂದರು.

ಯಾರೋ ಒಬ್ಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನನ್ನು ಹೊರತುಪಡಿಸಿದರೆ. ಬೇರೆಲ್ಲ ಬ್ಲಾಕ್ ಅಧ್ಯಕ್ಷರು ನನ್ನ ಜೊತೆ ಇದ್ದಾರೆ. ನಮ್ಮ ಕಾರ್ಯಕರ್ತರು ಹಾಗೂ ಬೆಂಬಲಿಗರು ಆರ್ ಎಸ್ ಎಸ್ ಮತ್ತು ಬಜರಂಗದಳದ ಜೊತೆಗೆ ಗುರುತಿಸಿಕೊಂಡಿದ್ದಾರೆ ಎಂದು ಆರೋಪಿಸುವವರು ಸುಮಾರು 30 ವರ್ಷದಿಂದ ಪಕ್ಷವನ್ನು ಅಧಿಕಾರಕ್ಕೆ ತರಲು ಏಕೆ ಸಾಧ್ಯವಾಗಲಿಲ್ಲ. ನನ್ನ ವಿರುದ್ಧ ಷಡ್ಯಂತ್ರ ನಡೆಸುತ್ತಿರುವ ಕುತಂತ್ರಿಗಳನ್ನು ಜೊತೆಯಲ್ಲಿ ಇಟ್ಟುಕೊಂಡು ಕೆಲಸ ಮಾಡಲು ಹೇಗೆ ಸಾಧ್ಯ. ಈ ಎಲ್ಲಾ ವಿಚಾರಗಳನ್ನು ವರಿಷ್ಠರ ಗಮನಕ್ಕೆ ತಂದಿದ್ದೇವೆ ಎಂದು ಸ್ಪಷ್ಟಪಡಿಸಿದರು.

**ಹಿರಿಯರು ಕಿರಿಯರು ಎಂಬ ಭೇದಭಾವವಿಲ್ಲ:** ಪಕ್ಷದಲ್ಲಿ ಹಿರಿಯರು ಕಿರಿಯರು ಎಂಬ ಭೇದಭಾವವಿಲ್ಲ. ಯಾರು ಪಕ್ಷಕ್ಕಾಗಿ ದುಡಿಯುತ್ತಾರೋ ಅಂತವರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನಮ್ಮ ತಾಯಿಯ ಕಾಲದಲ್ಲಿ ಇದ್ದ ಕೆಲ ಸಮಕಾಲಿನ ಮುಖಂಡರು ಕೇವಲ ಒಂದು ಹೋಬಳಿಗೆ ಮಾತ್ರ ಸೀಮಿತರಾಗಿದ್ದು, ಅವರ ಮಾತನ್ನೇ ಅನುಸರಿಸಬೇಕು ಎನ್ನುವ ಧೋರಣೆ ಸರಿಯಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಪಕ್ಷಕ್ಕಾಗಿ ಅವಿರತವಾಗಿ ಶ್ರಮಿಸುತ್ತಿರುವವರ ಮಾತನ್ನು ಸಹ ಕೇಳಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನನ್ನ ವಿರುದ್ಧ ಕೆಲ ದಿನಗಳ ಹಿಂದೆ ದೂರನ್ನು ನೀಡಿರುವವರು ಕೆಲವೇ ಕೆಲವು ಜನರಷ್ಟೇ ಎಂದು ಮಾಹಿತಿ ನೀಡಿದರು.

## ಜೆಸ್ಕಾಂ ನಿರ್ಲಕ್ಷ್ಯಕ್ಕೆ ಕುಟುಂಬಸ್ಥರ ಆಕ್ರೋಶ!

# ಗಾಳಿಗೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಮಹಿಳೆ ಸಾವು



**ಬೀದರ್, ಜು. 10:** ವಿದ್ಯುತ್ ತಂತಿ ತಗುಲಿ ಕೂಲಿ ಕಾರ್ಮಿಕ ಮಹಿಳೆಯೊಬ್ಬರು ಮೃತಪಟ್ಟಿರುವ ದುರ್ಘಟನೆ ಜಿಲ್ಲೆಯ ಭಾಲ್ಕಿ ತಾಲೂಕಿನ ಮಳಚಾಪುರ ಗ್ರಾಮದಲ್ಲಿ ನಡೆದಿದೆ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಗಾಳಿಗೆ ತುಂಡಾಗಿ ಕೆಳಗೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿದ ಪರಿಣಾಮ ತುಳಸಮ್ಮ (50) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ತುಳಸಮ್ಮ ಅವರು ಕಬ್ಬಿನ ಗದ್ದೆಯಲ್ಲಿ ದಿನನಿತ್ಯದ ಕೆಲಸ ಮಾಡುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಜಮೀನಿನೊಳಗೆ ಬಿದ್ದಿದ್ದ ವಿದ್ಯುತ್ ತಂತಿ ಇರುವುದನ್ನು ಗಮನಿಸದೇ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ಪ್ರವಹಿಸಿ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳೀಯರು ಮತ್ತು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಬೀದರ್‌ನ ಬ್ರಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ.

ಬ್ರಿಮ್ಸ್ ಆಸ್ಪತ್ರೆ ಎದುರು ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಘಟನೆಗೆ ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಆಕ್ರೋಶ ಹೊರಹಾಕಿದ್ದಾರೆ. ಘಟನೆ ಕುರಿತು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

# ಯುವತಿಯನ್ನು ಚುಡಾಯಿಸಿದ್ದಕ್ಕೆ ಹತ್ಯೆ?

ಜಿಲ್ಲೆಯಲ್ಲಿ ಕ್ಷುಲ್ಲಕ ಕಾರಣಕ್ಕೆ ಯುವಕನೊಬ್ಬನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಬೀದರ್‌ನ ಜಮಿಸ್ತಾನಪುರ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಕಿರಣ್ (26) ಮೃತ ದುರ್ದೈವಿ ಎಂದು ತಿಳಿದುಬದಿದೆ. ಮೂರು ದಿನಗಳ ಹಿಂದೆ ಅನ್ಯಕೋಮಿನ (ಮುಸ್ಲಿಂ) ಯುವತಿ ಯನ್ನು ಚುಡಾಯಿಸಿದ್ದಾನೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಿರಣ್‌ಗೆ ಕೆಲವರು ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಬಳಿಕ ನಿನ್ನೆ ಸಂಜೆ ಸುಮಾರು 5 ಗಂಟೆಗೆ ಸಂಧಾನದ ನೆಪದಲ್ಲಿ ಕರೆಸಿಕೊಂಡು ಮಾರಕಾಸ್ತ್ರ ಗಳಿಂದ ಮನಬಂದಂತೆ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ, ಪ್ರಕರಣದ ಕುರಿತು ತನಿಖೆ ಆರಂಭಿಸಲಾಗಿದೆ. ಈ ಸಂಬಂಧ ಬೀದರ್ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಂ.ಡಿ. ಜುನೈದ್ ಸಿರಾಜ್ ಸೇರಿದಂತೆ ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

# ಗಣಿಧೂಳಿನ ಬಳ್ಳಾರಿಯಲ್ಲೀಗ ಮೆಣಸಿನಕಾಯಿ ಘಾಟು: ಕೃಷಿಕರ ಬದುಕಿಗೆ ಆಧಾರ

**ಬಳ್ಳಾರಿ, ಜು.10:** ಒಂದು ಕಾಲದಲ್ಲಿ ಗಣಿ ಧೂಳಿನಿಂದ ಕೆಂಗೆಟ್ಟಿದ್ದ ಬಳ್ಳಾರಿಯಲ್ಲಿ ಇದೀಗ ಮೆಣಸಿನಕಾಯಿ ಎಂದರೆ ಖಾರ, ಘಾಟು ಆವರಿಸಿ ಕೊಂಡಿದೆ. ಬರ ಮತ್ತು ಅತಿ ಹೆಚ್ಚು ಬಿಸಿಲಿಗೆ ಹೆಸರಾದ ಬಳ್ಳಾರಿ ಜಿಲ್ಲೆಯಲ್ಲಿ ಅದೇ ಮೆಣಸಿನಕಾಯಿ, ಕೃಷಿಕರ ಬಾಳಿಗೆ ಆಧಾರವಾಗಿದೆ.

ಸುಸಜ್ಜಿತವಾಗಿ ನಿರ್ಮಿಸಲಾದ ಹಸಿರುಮನೆಗಳು ಹಾಗೂ ಷೇಡ್‌ನೆಟ್ ಗಳು. ಟ್ರೇಗಳಲ್ಲಿ ಗೊಬ್ಬರ ತುಂಬಿಸಿ, ಬೀಜ ಬಿತ್ತಿ ನೀರು ಉಣಿಸುತ್ತಿರುವ ಮಹಿಳಾ ಕಾರ್ಮಿಕರು. ಬಳ್ಳಾರಿ ತಾಲ್ಲೂಕಿನ ಸಿರುವಾರ ಹಾಗೂ ಕಪ್ಪಗಲ್ಲು ಗ್ರಾಮಗಳ ಪರಿಸರದಲ್ಲಿ ಸಾಮಾನ್ಯವಾಗಿ ಕಂಡು ಬರುವ ದೃಶ್ಯಗಳಿವು. ಗಣಿಗಾರಿಕೆಗಾಗಿ ಹೆಸರುವಾಸಿ ಯಾದ ಬಳ್ಳಾರಿ ಜಿಲ್ಲೆ ಇಂದು ಕರ್ನಾಟಕದ ಪ್ರಮುಖ ಮೆಣಸಿನಕಾಯಿ ಉತ್ಪಾದಕ ಜಿಲ್ಲೆಯಾಗಿ ಪ್ರಸಿದ್ಧಿ ಪಡೆದಿದೆ. ಒಣ ಹವಾಮಾನ ಮತ್ತು ಫಲವತ್ತಾದ ಮಣ್ಣಿನಿಂದಾಗಿ ಗುಣಮಟ್ಟದ ಮೆಣಸಿನಕಾಯಿ ಬೆಳೆಗೆ ಈ ಪ್ರದೇಶ ಪೂರಕವಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರದ 'ಒಂದು ಜಿಲ್ಲೆ – ಒಂದು ಉತ್ಪನ್ನ' ಯೋಜನೆಯಡಿ ಬಳ್ಳಾರಿ ಜಿಲ್ಲೆಗೆ ಮೆಣಸಿನಕಾಯಿಯನ್ನು ಆಯ್ಕೆ ಮಾಡಲಾಗಿದೆ.



ರಾಷ್ಟ್ರೀಯ ತೋಟಗಾರಿಕೆ ಮಿಷನ್ ಇದಕ್ಕೆ ಅಗತ್ಯ ಆರ್ಥಿಕ ನೆರವು ನೀಡುವ ಮೂಲಕ ಜಾಗತಿಕ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುತ್ತಿದೆ. ಸ್ಥಳೀಯವಾಗಿ 'ನೆರಳು ಪರದೆ ಮನೆ' ಎಂದೇ ಖ್ಯಾತಿಯಾಗಿರುವ ಈ ಆಧುನಿಕ ನರ್ಸರಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರಗಳು ಶೇ.50 ರಷ್ಟು ಸಬ್ಸಿಡಿ ನೀಡುತ್ತಿವೆ. ಸರ್ಕಾರದ ಈ ಪ್ರೋತ್ಸಾಹದಿಂದಾಗಿ ಕೃಷಿಕರು ಅತ್ಯಂತ ಉತ್ಸಾಹದಿಂದ ಷೇಡ್‌ನೆಟ್ ನರ್ಸರಿಗಳತ್ತ ಮುಖ ಮಾಡುತ್ತಿದ್ದಾರೆ.

ಸುತ್ತಮುತ್ತಲಿನ ರೈತರು ನೀಡುವ ಬೀಜಗಳನ್ನು ಪಡೆದು, ಆಧುನಿಕ ತಂತ್ರಜ್ಞಾನದೊಂದಿಗೆ ಇಲ್ಲಿ ಮೆಣಸಿನ ಸಸಿಗಳನ್ನು ಬೆಳೆಸಿಕೊಡಲಾಗುತ್ತಿದೆ. ಹತ್ತಿ ಮತ್ತು ಮೆಕ್ಕೆಜೋಳಕ್ಕೆ ಹೋಲಿಸಿದರೆ ಮೆಣಸಿನಕಾಯಿ ಸಸ್ಯೋತ್ಪಾದನೆ ಇಲ್ಲಿನ ರೈತರಿಗೆ ಗರಿಷ್ಠ ಲಾಭ ತರುತ್ತಿದೆ. ಬಳ್ಳಾರಿಯ ಅತಿ ತಾಪಮಾನವನ್ನು ಶೇಕಡ 50 ರಷ್ಟು ತಡೆಹಿಡಿಯುವ ಸಾಮರ್ಥ್ಯ ಈ ಷೇಡ್‌ನೆಟ್‌ಗಳಿಗಿದೆ. ಇದು ಸಸಿಗಳಿಗೆ ರೋಗಬಾಧೆ ತಡೆಯುವ ಜೊತೆಗೆ, ಕೃಷಿ ಇಳುವರಿಯನ್ನು ದುಪ್ಪಟ್ಟು ಮಾಡಲು ನೆರವಾಗುತ್ತದೆ. ಟ್ರೇಗಳಲ್ಲಿ ಬಿತ್ತಿದ 6 ದಿನಕ್ಕೆ ಮೊಳಕೆ ಬರುತ್ತದೆ.

ದಿನಬಿಟ್ಟು ದಿನ ನೀರು ಹಾಯಿಸಿದರೆ, 45 ರಿಂದ 50 ದಿನಗಳಲ್ಲಿ ಆರೋಗ್ಯಕರ ಸಸಿಗಳು ರೈತರ ಕೈಸೇರಲು ಸಿದ್ಧವಾಗುತ್ತವೆ. ಕೃಷಿಕ ಬಸವರಾಜ್ ಮಾತನಾಡಿ, ಟ್ರೇಗಳಲ್ಲಿ ಸಾವಯವ ಗೊಬ್ಬರದೊಂದಿಗೆ ಬೀಜ ಹಾಕಿ ಆರು ದಿನ ಮುಚ್ಚಿಡಲಾಗುತ್ತದೆ.

ಏಳನೇ ದಿನದಿಂದ ಮೊಳಕೆ ಮೂಡಲು ಆರಂಭವಾಗುತ್ತದೆ. 45–50 ದಿನಕ್ಕೆ ಗುಣಮಟ್ಟದ ಸಸಿಗಳನ್ನು ರೈತರಿಗೆ ನೀಡಲಾಗುತ್ತಿದ್ದು, ಈ ಬಾರಿ ಮೆಣಸಿನ ಸಸಿಗಳಿಗೆ ಭಾರಿ ಬೇಡಿಕೆಯಿದೆ ಎಂದು ವಿವರಿಸಿದರು.

# ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ: ಸುರಕ್ಷಿತ-ಗುಣಮಟ್ಟದ ಬಸ್ ಸೇವೆಗೆ ಅಧ್ಯಕ್ಷ ಅರುಣಕುಮಾರ ಪಾಟೀಲ್ ಸೂಚನೆ

**ಕಲಬುರಗಿ, ಜು. 10:** ಪ್ರಯಾಣಿಕ ಸ್ನೇಹಿ ಸೇವೆ, ಸುರಕ್ಷಿತ ಸಂಚಾರ ಹಾಗೂ ಸೇವೆಯ ಗುಣಮಟ್ಟವನ್ನು ಮತ್ತಷ್ಟು ಉತ್ತಮಗೊಳಿಸುವ ಉದ್ದೇಶ ದಿಂದ ಅಧಿಕಾರಿಗಳಿಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಪಾಟೀಲ್ ಹಲವು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ನಿಗಮದ ಕೇಂದ್ರ ಕಚೇಯಿರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರ ಉಪಸ್ಥಿತಿ ಯಲ್ಲಿ ಇಲಾಖಾ ಮುಖ್ಯಸ್ಥರು ಮತ್ತು ವಿಭಾಗೀಯ ನಿಯಂತ್ರಣಾ ಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಸ್‌ಗಳನ್ನು ನಿಗದಿತ ಬಸ್ ನಿಲ್ದಾಣಗಳಲ್ಲಿಯೇ ನಿಲ್ಲಿಸಿ, ಸಂಚಾರ ಶಿಸ್ತು ಕಟ್ಟುನಿಟ್ಟಾಗಿ ಪಾಲಿಸುವಂತೆ, ಪ್ರಯಾಣಿಕರು ಬಸ್ಸಿನ ಕಿಟಕಿಗಳಿಂದ ತಲೆ ಅಥವಾ ಕೈಗಳನ್ನು ಹೊರಗಡೆ ಹಾಕದಂತೆ ಚಾಲಕರು ಹಾಗೂ ನಿರ್ವಾಹಕರು ಕಾಲಕಾಲಕ್ಕೆ ಕಡ್ಡಾಯವಾಗಿ ಸುರಕ್ಷತಾ ಸೂಚನೆ ಗಳನ್ನು ನೀಡುವಂತೆ ಸೂಚಿಸಿದರು.



ರ್‍ಯಾಷ್ ಡ್ರೈವಿಂಗ್ ಹಾಗೂ ಓವರ್ ಸ್ಪೀಡ್ ಚಾಲನೆಯನ್ನು ಸಂಪೂರ್ಣವಾಗಿ ತಡೆದು, ಸುರಕ್ಷಿತ ಚಾಲನೆಗೆ ಹೆಚ್ಚಿನ ಆದ್ಯತೆ ನೀಡುವಂತೆ, ಇಂಧನ ಉಳಿತಾಯಕ್ಕೆ ವಿಶೇಷ ಒತ್ತು ನೀಡಿ, ಆರ್ಥಿಕ ಹಾಗೂ ಸುರಕ್ಷಿತ ಚಾಲನಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಇಂಧನ ದಕ್ಷತೆಯನ್ನು ಹೆಚ್ಚಿಸಿ, ಅನಗತ್ಯ ಇಂಧನ ವ್ಯರ್ಥವಾಗದಂತೆ ಕ್ರಮವಹಿಸುವಂತೆ, ಶಕ್ತಿ ಯೋಜನೆಯ ಫಲಾನುಭವಿ ಮಹಿಳಾ ಪ್ರಯಾಣಿಕ ರಿಂದ ಸ್ವೀಕಯಿರಿಸಲಾಗುವ ದೂರು ಗಳನ್ನು ಗಂಭೀರವಾಗಿ ಪರಿಗಣಿಸಿ, ತ್ವರಿತವಾಗಿ ಪರಿಹರಿಸುವಂತೆ ಅವರು ತಿಳಿಸಿದರು.

ಬಸ್‌ಗಳ ಬಾಹ್ಯ ಸ್ವಚ್ಛತೆಯೊಂದಿಗೆ ಆಂತರಿಕ ಸ್ವಚ್ಛತೆಗೂ ಸಮಾನ ಮಹತ್ವ ನೀಡಿ, ಪ್ರತಿಯೊಂದು ವಾಹನವನ್ನು ಶುಚಿಯಾಗಿ ಹಾಗೂ ಪ್ರಯಾಣಿಕ ಸ್ನೇಹಿಯಾಗಿ ನಿರ್ವಹಿಸಲು ಕ್ರಮ ಕೈಗೊಳ್ಳುವಂತೆ, ಶಕ್ತಿ ಯೋಜನೆಯ ಮಹಿಳಾ ಪ್ರಯಾಣಿಕ ರೊಂದಿಗೆ ಚಾಲಕರು ಹಾಗೂ ನಿರ್ವಾಹಕರು ಸೌಜನ್ಯ, ಗೌರವ ಮತ್ತು ಮಾನವೀಯತೆಯಿಂದ ವರ್ತಿಸುವಂತೆ ಸೂಚನೆ ನೀಡಿ, ಯಾವುದೇ ರೀತಿಯ ಅಸಭ್ಯ ಅಥಯವಾ ನಿರ್ಲಕ್ಷ್ಯದ ವರ್ತನೆಗೆ ಅವಕಾಶ ನೀಡದಿರುವಂತೆ, ಸಾರ್ವಜನಿಕರಿಂದ ಸ್ವೀಕರಿಸಲಾಗುವ ಎಲ್ಲ ದೂರುಗಳು, ಸಲಹೆಗಳು ಹಾಗೂ ಅಭಿಪ್ರಾಯ ಗಳನ್ನು ಚಾಚೂ ತಪ್ಪದೆ ಪರಿಶೀಲಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅವರು ಹೇಳಿದರು.

ಸಭೆಯ ಅಂತ್ಯದಲ್ಲಿ ಸುರಕ್ಷಿತ ಸಂಚಾರ –ಗುಣಮಟ್ಟದ ಸೇವೆ– ಪ್ರಯಾಣಿಕರ ತೃಪ್ತಿಯೇ ನಮ್ಮ ಆದ್ಯತೆ ಎಂಬ ಧ್ಯೇಯದೊಂದಿಗೆ ನಿಗಮದ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಮನ್ವಯದಿಂದ, ಜವಾಬ್ದಾರಿ ಯುತವಾಗಿ ಹಾಗೂ ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸಿ, ಸುರಕ್ಷಿತ, ಸಮಯೋಚಿತ ಮತ್ತು ಜನವಿಶ್ವಾಸಕ್ಕೆ ತಕ್ಕಂತಹ ಅತ್ಯುತ್ತಮ ಸಾರಿಗೆ ಸೇವೆಯನ್ನು ಒದಗಿಸುವಂತೆ ಕಟ್ಟುನಿಟ್ಟಿನ ನಿರ್ದೇಶನವನ್ನು ಅರುಣಕುಮಾರ್ ಎಂ. ವೈ. ಪಾಟೀಲ್ ಅವರು ನೀಡಿದರು.





ಬೆಂಗಳೂರಿನ ಐಐಎಸ್ಸಿ ಆವರಣದಲ್ಲಿ ಶುಕ್ರವಾರ ನಡೆದ ಭಾರತೀಯ ವಿಜ್ಞಾನ ಸಂಸ್ಥೆಯ ಘಟಿಕೋತ್ಸವದಲ್ಲಿ ಐಐಎಸ್ಸಿಯ ಹೊಸ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

# ಗೋಕರ್ಣದ ಮಣ್ಣಿನ ಹೆಮ್ಮೆಯ ಕಣ್ಣು ಡಾ. ವಿ.ಆರ್.ಮಲ್ಲನ್ ನೆನಪು ಮಾತ್ರ



ಗೋಕರ್ಣದ ಆ ಕಿರಿದಾದ ಬೀದಿಗಳಲ್ಲಿ, ಕಡಲಿನ ಗಾಳಿ ಹೊತ್ತು ತರುವ ಉಪ್ಪಿನ ಘಮಲಿನ ನಡುವೆ, ಕೆಲವು ವ್ಯಕ್ತಿತ್ವಗಳು ಕೇವಲ ಮನುಷ್ಯರಾಗಿ ಉಳಿಯುವುದಿಲ್ಲ; ಅವರು ಆ ಊರಿನ ಜೀವನಾಡಿಯೇ ಆಗಿಬಿಡುತ್ತಾರೆ. ಅಂತಹ ಅಪರೂಪದ, ಪ್ರೀತಿಯ ಆವರಣವೇ ಡಾ. ವಿನಾಯಕ್ ರಾಮಚಂದ್ರ ಮಲ್ಲನ್. ನಮ್ಮ ಹೆಮ್ಮೆಯ ಗೋಕರ್ಣದ ಪ್ರಪ್ರಥಮ ಎಂಬಿಬಿಎಸ್ ವೈದ್ಯರಾಗಿದ್ದ ಅವರು, ಕೇವಲ ರೋಗಕ್ಕಷ್ಟೇ ಚಿಕಿತ್ಸೆ ನೀಡಿದವರಲ್ಲ, ಇಡೀ ಊರಿನ ನಾಡಿಬಡಿತವನ್ನು ಅಂಗೈ ಮೇಲಷ್ಟೇ ಅಲ್ಲ, ಹೃದಯದಲ್ಲಿ ಇಟ್ಟುಕೊಂಡು ಮರುಕಪಟ್ಟವರು. ಅವರದೊಂದು ದೇವತಾ ಮನುಷ್ಯನ ಛಾಪು. ಜನರೆಲ್ಲ "ಮಲ್ಲನ್ ಡಾಕ್ಟು" ಎಂದರೆ ಸಾಕು, ಅರ್ಧ ಕಾಯಿಲೆ ವಾಸಿಯಾದಂತೆ ನಿಟ್ಟುಸಿರು ಬಿಡುತ್ತಿದ್ದರು. ಊರಿನಲ್ಲಿ ಕರೆಂಟ್ ಇಲ್ಲದ ಆ ಕಾಲದಲ್ಲಿ, ರಾತ್ರಿಯ ವೇಳೆ ಯಾರಿಗೆ ಕಷ್ಟ ಬಂದರೂ ಇವರು ಚಿಮಣಿ ದೀಪವನ್ನು ಕೈಯಲ್ಲಿ ಹಿಡಿದುಕೊಂಡು, ಕತ್ತಲನ್ನು ಸೀಳಿ ಮನೆಮನೆಗೆ ಬಂದು ಔಷಧಿಯನ್ನು ನೀಡಿ ಜೀವ ಉಳಿಸುತ್ತಿದ್ದ ಆ ದಿನಗಳನ್ನು ಗೋಕರ್ಣ ಎಂದಿಗೂ ಮರೆಯಲು ಸಾಧ್ಯವಿಲ್ಲ.

# ಜಾತಿ ಜನಗಣತಿ ಬಗ್ಗೆ ನಿಲುವು ಸ್ಪಷ್ಟಪಡಿಸಿ ಸಿಎಂಗೆ ಮಾಜಿ ಸಚಿವ ಹರತಾಳು ಹಾಲಪ್ಪ ಆಗ್ರಹ

**ದಾವಣಗೆರೆ, ಜು.10:** ಜಾತಿ ಜನಗಣತಿಯ ಬಗ್ಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿಲುವು ಸ್ಪಷ್ಟಪಡಿಸಬೇಕು. ಈವರೆಗೆ ಜಾತಿಗಣತಿ ಬಗ್ಗೆ ಚಕಾರ ಎತ್ತಿಲ್ಲ. ರಾಜ್ಯ ಸರ್ಕಾರ ಕೂಡಲೇ ಜಾತಿಜನಗಣತಿ ವರದಿ ಬಿಡುಗಡೆ ಮಾಡಬೇಕು ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಹರತಾಳು ಹಾಲಪ್ಪ ಹೇಳಿದರು.

ದಾವಣಗೆರೆಯಲ್ಲಿ ಮಾತನಾಡಿದ ಅವರು, ಜಾತಿ ಜನಗಣತಿಯಲ್ಲಿನ ಅಂಕಿ–ಅಂಶಗಳ ಬಹಿರಂಗಪಡಿಸುವ ಮೂಲಕ ರಾಜ್ಯ ವ್ಯಾಪಿ ಚರ್ಚೆಗೆ ಬಿಡಬೇಕು. ರಾಜ್ಯ ಸರ್ಕಾರ ಜಾತಿ ಜನಗಣತಿ ವರದಿ ಮುಂದಿಟ್ಟು ಕೊಂಡು ಹಿಂದುಳಿದ ವರ್ಗಗಳ ಸಮುದಾಯದವರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ. ಅಹಿಂದ ಪರ ಎಂದು ಹೇಳುತ್ತಲೇ ಎರಡು ಬಾರಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್‌ಗೆ ಅಹಿಂದದ ಬಗ್ಗೆ ಬದ್ಧತೆಯೇ ಇಲ್ಲ ಎಂದರು.

ಅಹಿಂದ ಚಾಂಪಿಯನ್ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ತ್ಯಜಿಸುವ ಮುನ್ನಾದಿನ ತರಾತುರಿಯಲ್ಲಿ ಜಾತಿಜನಗಣತಿ ವರದಿ ಸ್ವೀಕರಿಸಿದ್ದಾರೆ. ಈಗಿನ



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಜಾತಿಜನಗಣತಿ ಜಾರಿಗೆ ತಿಳಿ ಹೇಳಬೇಕು. ಜಾತಿ ಜನಗಣತಿ ವರದಿ ಬಿಡುಗಡೆ ಮಾಡದಿದ್ದಲ್ಲಿ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದರು.

# ಧರ್ಮಸ್ಥಳ ವಿರುದ್ಧ ಷಡ್ಯಂತ್ರ: ಅತಿ ಹಿಂದುಳಿದ ಮಠಾಧೀಶರಿಂದ ಹೆಗ್ಗಡೆಯವರಿಗೆ ಬೆಂಬಲ ಪತ್ರ ಸಲ್ಲಿಕೆ

**ಕಲಬುರಗಿ, ಜು.10– :** ಭಾರತದ ಪವಿತ್ರ ಶಬ್ದ ಕೇಂದ್ರ ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಅದರ ಧರ್ಮ ಅಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಷಡ್ಯಂತ್ರ ರೂಪಿಸಿ ಜಾಗತಿಕ ಮಟ್ಟದಲ್ಲಿ ಶ್ರೀ ಕ್ಷೇತ್ರಕ್ಕೆ ಅಪಮಾನ ಎಸಗುತ್ತಿರುವ ದುಷ್ಟಶಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ರಾಜ್ಯದ ಅತಿ ಹಿಂದುಳಿದ ಮಠಾಧೀಶರು ಸಂಪೂರ್ಣವಾಗಿ ಡಾ. ಡಿ ವೀರೇಂದ್ರ ಹೆಗ್ಗಡೆಯವರ ಜೊತೆಗಿರುವುದಾಗಿ ಬೆಂಬಲ ಪತ್ರವನ್ನು ರಾಜ್ಯ ಅತಿಹಿಂದುಳಿದ ಮಠಾಧೀಶರ ಮಹಾಸಭಾದ ವತಿಯಿಂದ ಹಸ್ತಾಂತರಿಸಲಾಯಿತು.

ಮಹಾಸಭಾದ ರಾಜ್ಯಾಧ್ಯಕ್ಷ ಡಾ. ಪ್ರಣವಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಮಹಾಸಭಾ ಕೋರ್ ಕಮಿಟಿಯ ಏಳು ಮಂದಿ ಅತಿ ಹಿಂದುಳಿದ ಮಠಾಧೀಶರು ಶುಕ್ರವಾರ (ಜುಲೈ 10ಕ್ಕೆ) ಧರ್ಮಸ್ಥಳಕ್ಕೆ ತೆರಳಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಮಾಡಿ ನಂತರ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆ ಅವರ ಜೊತೆ ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ಮಾಡಿ ಬೆಂಬಲ ಪತ್ರ ಅರ್ಪಣೆ ಮಾಡಿದರು.

ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಸಂಚು ಹೂಡಿ ಅಪಮಾನವೆಸಗುವ ಹಾಗೂ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಕಳಂಕ ಹಚ್ಚುವ ದುಷ್ಟ ಶಕ್ತಿಗಳ ವಿರುದ್ಧ ಸನಾತನ ಹಿಂದೂ ಧರ್ಮ ಸಂಪ್ರದಾಯದ ಅತಿ ಹಿಂದುಳಿದ ಸ್ವಾಮೀಜಿಗಳು ಒಗ್ಗಟ್ಟಿನ ಬೆಂಬಲ ವ್ಯಕ್ತಪಡಿಸಿ ಡಾ. ಹೆಗ್ಗಡೆಯವರಿಗೆ ದೇವರು ಪೂರ್ಣ ಆರೋಗ್ಯ ಭಾಗ್ಯ ನೀಡಿ ನಿರಂತರವಾಗಿ ಧಾರ್ಮಿಕ ,ಸಾಮಾಜಿಕ ಕ್ಷೇತ್ರದ ಸೇವೆ ನೀಡಲು ಶಕ್ತಿ ನೀಡಲಿ ಎಂದು ಮಠಾಧೀಶರು ಪ್ರಾರ್ಥಿಸಿದರು.

ಅತಿ ಹಿಂದುಳಿದ ಸ್ವಾಮೀಜಿಗಳ ಸನ್ಮಾನ ಹಾಗೂ ಬೆಂಬಲ ಪತ್ರವನ್ನು ಸ್ವೀಕರಿಸಿದ ನಂತರ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಮಾತನಾಡಿ ಅತಿ ಹಿಂದುಳಿದ ಪೂಜ್ಯ ಸಂತರುಗಳು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಬೆಂಬಲ ಪತ್ರ ನೀಡಿರುವುದಕ್ಕೆ ಸಂತಸ ಉಂಟಾಗಿದೆ ಧಾರ್ಮಿಕ ಮುಂದಾಳುಗಳು ಹಾಗೂ ಮಠಾಧೀಶರು ಸನಾತನ ಸಂಪ್ರದಾಯ ಉಳಿಸಿ ಬೆಳೆಸಲು ಸದಾ ಒಗ್ಗಟ್ಟಿನಿಂದ ಜೊತೆಗಿರಬೇಕು ಎಂದು ಹೇಳಿದರು. ನಂತರ ಎಲ್ಲ ಸ್ವಾಮೀಜಿಗಳಿಗೆ ಪ್ರಸಾದ ವಿತರಿಸಿ ಸತ್ಕರಿಸಿದರು.

ಹಿಂದುಳಿದ ಮಠಾಧೀಶರ ಮಹಾಸಭಾ ರಾಜ್ಯ ಮಟ್ಟದ ಚಿಂತನಾ ಶಿಬಿರ ಕಲಬುರಗಿಯಲ್ಲಿ ಜೂನ್ 27 ಮತ್ತು 28 ರಂದು ನಡೆದು ಅದರ ನಿರ್ಣಯದಂತೆ ಶ್ರೀ ಕ್ಷೇತ್ರ ಧರ್ಮಸ್ಥಳ ಭೇಟಿ ಹಾಗೂ ಬೆಂಬಲ ಪತ್ರ ಹಸ್ತಾಂತರಕ್ಕೆ ನಿರ್ಧರಿಸಲಾಗಿತ್ತು. ಅತಿ ಹಿಂದುಳಿದ ಮಠಾಧೀಶರ ಮಹಾಸಭಾದ ಉಪಾಧ್ಯಕ್ಷ ಕುಂಬಾರ ಗುರುಪೀಠ ಚಿತ್ರದುರ್ಗದ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ, ಶಿವಸಿಂಪಿ ಸಮಾಜದ ಬಾಗಲಕೋಟೆ ಮಹಾಂತ ಮಂದಾರ ಮಠದ ಶ್ರೀ ಮಹಾಂತ ದೇವರು, ಮೊಳಕಾಲ್ಮೂರು ಮಾದಾರ ಚೆನ್ನಯ್ಯ ಗುರುಪೀಠದ ಶಿವಮೂರ್ತಿ ಮಹಾಸ್ವಾಮೀಜಿ, ತೆರೆದಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಕಾಶ್ ಮಹಾರಾಜ್, ತರೀಕೆರೆ ಬಂಜಾರ ಗುರು ಪೀಠದ ಮಂಜು ಮಹಾರಾಜ್, ಬೆಂಚಿನಕಟ್ಟೆ ರವಿಗಿರಿಯ ಬೋವಿ ಗುರುಪೀಠದ ಆತ್ಮಾನಂದ ಸ್ವಾಮೀಜಿ ಹಾಗೂ ಈಡಿಗ ಮಹಾ ಮಂಡಳಿಯ ರಾಜ್ಯ ಉಪಾಧ್ಯಕ್ಷರಾದ ನವೀನ್ ಕುಮಾರ್ ಮಂಗಳೂರು ಜೊತೆಗಿದ್ದರು.



## ಉಜಿರೆಯಿಂದ ಧರ್ಮಸ್ಥಳಕ್ಕೆ ಬೃಹತ್ ಪಾದಯಾತ್ರೆ ಎಚ್ಚರಿಕೆ

**ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಧಾರ್ಮಿಕ, ಸಾಮಾಜಿಕ ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಅನುಪಮ ಸಾಧನೆ ಮಾಡಿ ಸಮಾಜದ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಅವರ ವಿರುದ್ಧ ವಿನಾಕಾರಣ ಷಡ್ಯಂತ್ರ ರೂಪಿಸುವ ದುಷ್ಟ ಶಕ್ತಿಗಳ ವಿರುದ್ಧ ಧ್ವನಿ ಎತ್ತಲು ಉಜಿರೆಯಿಂದ ಧರ್ಮಸ್ಥಳದವರೆಗೆ ಸುಮಾರು 200 ರಷ್ಟು ಹಿಂದುಳಿದ ವರ್ಗಗಳ ಸ್ವಾಮೀಜಿಗಳು ಅಥವಾ 1 ಲಕ್ಷದಷ್ಟು ಅಧಿಕ ಸಂಖ್ಯೆಯ ಹಿಂದುಳಿದ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಭಕ್ತ ಜನರ ಬೃಹತ್ ಪಾದಯಾತ್ರೆಯನ್ನು ಕೈಗೊಳ್ಳುವುದಾಗಿ ಮಹಾಸಭಾದ ಅಧ್ಯಕ್ಷರಾದ ಡಾ ಪ್ರಣವಾನಂದ ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ.**

### ಬೆಳಗಾವಿಯಲ್ಲಿ ಆರೆಸ್ಸೆಸ್ ಅಖಿಲ ಭಾರತೀಯ ಪ್ರಾಂತ ಪ್ರಚಾರಕ್ ಬೈಠಕ್

# ಎಸ್ಐಆರ್, ಶಾಖೆಗಳ ಸಂಖ್ಯೆ ಹೆಚ್ಚಿಸುವುದು ಸೇರಿ ಹಲವಾರು ವಿಷಯಗಳ ಚರ್ಚೆ

**ಬೆಳಗಾವಿ, ಜು.10:** ನಗರದಲ್ಲಿ ಆಯೋಜಿಸಿರುವ ಮೂರು ದಿನಗಳ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ದೇಶದ ವಿವಿಧೆಡೆಯಿಂದ ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕರು ಶುಕ್ರವಾರ ಬೆಳಗಾವಿಗೆ ಆಗಮಿಸಿದ್ದಾರೆ.

ರಾಷ್ಟ್ರವ್ಯಾಪಿ ಜನಗಣತಿ ಕಾರ್ಯ ಸೇರಿದಂತೆ ಹಲವಾರು ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತದೆ. ಸರಸಂಘ ಚಾಲಕ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಸಮ್ಮುಖದಲ್ಲಿ ಶುಕ್ರವಾರ ಪ್ರಾರಂಭವಾದ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಾರ್ಷಿಕ 'ಅಖಿಲ ಭಾರತೀಯ ಪ್ರಾಂತ ಪ್ರಚಾರಕ್ ಬೈಠಕ್' ಜುಲೈ 12 ರಂದು ಮುಕ್ತಾಯಗೊಳ್ಳಲಿದೆ.

ಸಭೆಯು ಆರ್‌ಎಸ್‌ಎಸ್ ಶಾಖೆಗಳ ಕೆಲಸವನ್ನು ಪರಿಶೀಲಿಸುತ್ತದೆ ಮತ್ತು ಸಂಘದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲು ಅವುಗಳ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆಗಳನ್ನು ಚರ್ಚಿಸುತ್ತದೆ. ಬೈಠಕ್‌ನಲ್ಲಿ, ದೇಶಾದ್ಯಂತದ ಎಲ್ಲಾ ಸಹ ಸರಕಾರ್ಯವಾಹ, ಅಖಿಲ ಭಾರತೀಯ ಕಾರ್ಯ ವಿಭಾಗ ಪ್ರಮುಖರು, ಕಾರ್ಯಕಾರಿ ಮಂಡಳಿಯ ಸದಸ್ಯರು, ಪ್ರಾಂತ ಪ್ರಚಾರಕರು, ಸಹ ಪ್ರಾಂತ ಪ್ರಚಾರಕರು, ಕ್ಷೇತ್ರ ಪ್ರಚಾರಕರು ಮತ್ತು ಸಹ ಕ್ಷೇತ್ರ ಪ್ರಚಾರಕರು ಭಾಗವಹಿಸುತ್ತಿದ್ದಾರೆ ಎಂದು ಆರ್‌ಎಸ್‌ಎಸ್ ಹೇಳಿಕೆಯಲ್ಲಿ ತಿಳಿಸಿದೆ.

ಸಂಘದ ಸಾಂಸ್ಥಿಕ ರಚನೆಯ ಪ್ರಕಾರ, ಎಲ್ಲಾ 11 ಕ್ಷೇತ್ರಗಳು ಮತ್ತು 46 ಪ್ರಾಂತಗಳ ಕಾರ್ಯಕರ್ತರು ಭಾಗವಹಿಸುತ್ತಿದ್ದಾರೆ. ಇದರ ಜೊತೆಗೆ, 32 ಸಂಘ–ಪ್ರೇರಿತ ಸಂಸ್ಥೆಗಳ ಅಖಿಲ ಭಾರತೀಯ ಸಂಘಟನ್ ಮಂತ್ರಿಗಳು ಸಹ ಉಪಸ್ಥಿತರಿರುತ್ತಾರೆ.

ಮಾರ್ಚ್‌ನಲ್ಲಿ ಸಮಲ್ಖಾ (ಹರಿಯಾಣ)ದಲ್ಲಿ ನಡೆದ ಆರ್‌ಎಸ್‌ಎಸ್ ಪ್ರತಿನಿಧಿ ಸಭೆಯ ನಂತರ, ಏಪ್ರಿಲ್, ಮೇ ಮತ್ತು ಜೂನ್‌ನಲ್ಲಿ ದೇಶಾದ್ಯಂತ ವಿವಿಧ ಹಂತದ ಸಂಘದ ತರಬೇತಿ ಶಿಬಿರಗಳನ್ನು ನಡೆಸಲಾಗಿದೆ ಎಂದು ಆರ್‌ಎಸ್‌ಎಸ್ ರಾಷ್ಟ್ರೀಯ ಮಾಧ್ಯಮ ಮತ್ತು ಪ್ರಚಾರ ಉಸ್ತುವಾರಿ ಸುನಿಲ್ ಅಂಬೇಕರ್ ಇತ್ತೀಚೆಗೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಬೈಠಕ್‌ನಲ್ಲಿ, ಶಾಖಾ ಮಟ್ಟದಲ್ಲಿ ಕಾರ್ಯ ಯೋಜನೆ (ವಾರ್ಷಿಕ ಯೋಜನೆಗಳು) ಅನುಷ್ಠಾನದ ಕುರಿತು ವಿವರವಾದ ಚರ್ಚೆಗಳನ್ನು ನಡೆಸಲಾಗುತ್ತದೆ. ಸಂಘ ಶತಾಬ್ದಿ (ಶತಮಾನೋತ್ಸವ) ಕ್ಕೆ ಸಂಬಂಧಿಸಿದಂತೆ ನಡೆಸಲಾದ "ಶಾಖಾ ಕಾರ್ಯ"ದ ವಿಸ್ತರಣೆಯನ್ನು ಬೈಠಕ್ ಪರಿಶೀಲಿಸುತ್ತದೆ ಮತ್ತು ಹೆಚ್ಚಿನ ಶಾಖಾ ವಿಸ್ತರಣೆಗಾಗಿ ಯೋಜನೆಗಳ ಕುರಿತು ಚರ್ಚಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.

2026 ರ ಸಂಘ ತರಬೇತಿ ಶಿಬಿರಗಳ ವರದಿಗಳು ಮತ್ತು ವಿಮರ್ಶೆಗಳು, ಶತಾಬ್ದಿ ವರ್ಷದಲ್ಲಿ ಪೂರ್ಣಗೊಂಡ ಕಾರ್ಯಕ್ರಮಗಳ ವಿಮರ್ಶೆ, ಉಳಿದ ನಿಗದಿತ ಕಾರ್ಯಕ್ರಮಗಳ ಯೋಜನೆ ಮತ್ತು 2026–27 ರ ಸರಸಂಘಚಾಲಕ್ ಅವರ ಪ್ರವಾಸ ಯೋಜನೆಗಳು (ಪ್ರವಾಸ ಯೋಜನೆಗಳು) ಚರ್ಚೆಗಳಲ್ಲಿ ಸೇರಿವೆ.ಸಂಘದ ಶತಮಾನೋತ್ಸವ ವರ್ಷದ (2025–26) ಉಳಿದ ಕಾರ್ಯಕ್ರಮಗಳು ವಿಜಯದಶಮಿ ಯವರೆಗೆ, ಅಂದರೆ ಅಕ್ಟೋಬರ್ 20, ರವರೆಗೆ ಮುಂದುವರಿಯುತ್ತವೆ.

ಸಭೆಯಲ್ಲಿ ಭಾಗವಹಿಸುವ ಪ್ರಚಾರಕರು ಪ್ರಸ್ತುತ ಸನ್ನಿವೇಶಗಳಿಗೆ ಸಂಬಂಧಿಸಿದ ಅನುಭವಗಳು ಮತ್ತು ಜನಗಣತಿಯಂತಹ ಪ್ರಮುಖ ಸಮಕಾಲೀನ ವಿಷಯಗಳ ಬಗ್ಗೆಯೂ ಚರ್ಚಿಸುತ್ತಾರೆ ಎಂದರು.

# ಮಳೆ ಕೊರತೆಯಿಂದ ಬಾಡಿದ ಹತ್ತಿ ಬೆಳೆ ಪರಿಶೀಲಿಸಿದ ಉಸ್ತುವಾರಿ ಕಾರ್ಯದರ್ಶಿ




ರಾಯಚೂರು ಜಿಲ್ಲೆಯಲ್ಲಿ ಮಳೆಯಿಲ್ಲದೇ ಬಾಡಿರುವ ಹತ್ತಿ ಬೆಳೆಯನ್ನು ಜಿಲ್ಲಾ ಉಸ್ತುವರಿ ಕಾರ್ಯದರ್ಶಿ ಎಸ್. ಎಸ್.ನಕುಲ ಅವರು ಮಸ್ಸಲಾಪುರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ರಾಯಚೂರು, ಜು.10:** ಜಿಲ್ಲೆಯಲ್ಲಿ ಜೂನ್‌ನಲ್ಲಿ ವಾಡಿಕೆಯಷ್ಟೂ ಮಳೆಯಾಗದ ಕಾರಣ ಬಿತ್ತಿದ ಬೆಳೆಗಳ ಪರಿಸ್ಥಿತಿಯನ್ನು ಅವ ಲೋಕಿಸಲು ತಾಲ್ಲೂಕಿನ ಮಸ್ಸಲಾಪೂರ ಗ್ರಾಮದಲ್ಲಿ ಬಿತ್ತನೆ ಆಗಿರುವ ಹತ್ತಿ ಬೆಳೆಗಳನ್ನು ಆರ್ಥಿಕ ಇಲಾಖೆಯ ಕಾರ್ಯದರ್ಶಿ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್. ಎಸ್.ನಕುಲ್ ಭೇಟಿ ನೀಡಿ ಪರಿಶೀಲನೆ ಮಾಡಿದರು. ಜೂನ್‌ನಲ್ಲಿ ಜಿಲ್ಲೆಯಲ್ಲಿ ಶೇ 22 ರಷ್ಟು ಮಳೆ ಕೊರತೆಯಾಗಿದೆ. ತೇವಾಂಶ ಕೊರತೆಯಿಂದ ಬೆಳೆಗಳು ಅಸಮರ್ಪಕವಾಗಿ ಮೊಳಕೆ ಒಡೆದಿವೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ ಚೌಹಾಣ ಅವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗೆ ಮಾಹಿತಿ ನೀಡಿದರು.

ಹವಾಮಾನ ಮುನ್ಸೂಚನೆಯನ್ವಯ ಬರದ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ. ರೈತರಿಗೆ ಬೆಳೆ ವಿಮೆ ಯೋಜನೆಯಿಂದ ಸಹಾಯವಾಗಲಿದೆ. ಆದ್ದರಿಂದ ರೈತರಲ್ಲಿ ಬೆಳೆ ವಿಮೆ ಯೋಜನೆ ಕುರಿತು ವ್ಯಾಪಕ ಪ್ರಚಾರ ಮಾಡುವ ಮೂಲಕ ಅರಿವು ಮೂಡಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

# ತುಂಗಭದ್ರಾ ಅಣೆಕಟ್ಟೆ ಒಳಹರಿವು ಹೆಚ್ಚಳ



**ಬಳ್ಳಾರಿ ಜು.10** ವಿಜಯನಗರ, ಬಳ್ಳಾರಿ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳ ಜೀವನಾಡಿ ಆಗಿರುವ ತುಂಗಭದ್ರಾ ಜಲಾಶಯನ ಪ್ರದೇಶದಲ್ಲಿ ವ್ಯಾಪಕ ಮಳೆ ಆಗುತ್ತಿರುವುದರಿಂದ ಜಲಾಶಯದ ಒಳಹರಿವಿನ ಪ್ರಮಾಣದಲ್ಲಿ ಏರಿಕೆ ಆಗಿದೆ.

ತುಂಗಭದ್ರಾ ಜಲಾಶಯಕ್ಕೆ 44,782 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದ ಗರಿಷ್ಠ ನೀರಿನ ಮಟ್ಟ 1,633.00 ಅಡಿ ಇದ್ದು. ಶುಕ್ರವಾರ ಜಲಾಶಯದ ನೀರಿನ ಮಟ್ಟ 1,596.66 ಅಡಿ ತಲುಪಿದೆ. ಜಲಾಶಯದ ನೀರಿನ ಸಂಗ್ರಹ ಮಟ್ಟ 17.511 ಟಿಎಂಸಿಗೆ ಏರಿಕೆ ಆಗಿದೆ.

ಜಲಾಶಯದ ಕಾಲುವೆಗಳ ಮೂಲಕ ಮಾತ್ರ 180 ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ. ಕಳೆದ ಮೂರು ದಿನದ ಅವದಿಯಲ್ಲಿ ಜಲಾಶಯದಲ್ಲಿ 4 ಅಡಿ ನೀರು ಹೆಚ್ಚಣವಾಗಿದೆ.

ಕಳೆದ ವರ್ಷ ಜಲಾಶಯದ ನೀರಿನ ಮಟ್ಟ 1624.83 ಅಡಿ ಇತ್ತು. ಜಲಾಶಯದಲ್ಲಿ 75.934 ಟಿಎಂಸಿ ನೀರಿನ ಸಂಗ್ರಹವಿತ್ತು. 45,955 ಕ್ಯೂಸೆಕ್ ನೀರಿನ ಒಳ ಹರಿವು ಇತ್ತು.

ಕಳೆದ ಎರಡು ಮೂರು ದಿನಗಳಿಂದ ಜಲಾಶಯದ ಒಳ ಹರಿವಿನ ಪ್ರಮಾಣ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದ್ದು. ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆ ಆಗುತ್ತಿರುವುದರಿಂದ ಒಳಹರಿವಿನ ಪ್ರಮಾಣ ಇನ್ನು ಹೆಚ್ಚಳವಾಗಲಿದೆ ಎಂದು ತುಂಗಭದ್ರಾ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಬತ್ತಿಹೋಗಿದ್ದ ತುಂಗಭದ್ರಾ ಜಲಾಶಯಕ್ಕೆ ನೀರು ಹರಿದು ಬರುತ್ತಿರುವುದರಿಂದ ಜಲಾಶಯಕ್ಕೆ ಹೊಸಕಳೆ ಬಂದಂತಾಗಿದೆ.

# ಶ್ರೀನಿವಾಸ್ ಮೋತ್ಕರ್ ಹುಟ್ಟುಹಬ್ಬ ಆಚರಣೆ: ಶುಭ ಕೋರಿದ ಮಾಜಿ ಶಾಸಕ ಸೋಮಶೇಖರರೆಡ್ಡಿ




**ಬಳ್ಳಾರಿ, ಜು.10:** ಬಳ್ಳಾರಿ ಮಹಾನಗರ ಪಾಲಿಕೆಯ

ವಿರೋಧ ಪಕ್ಷದ ನಾಯಕರು ಹಾಗೂ ಪಾಲಿಕೆಯ 24ನೇ ವಾರ್ಡಿನ ಸದಸ್ಯರೂ ಆದ ಶ್ರೀನಿವಾಸ್ ಮೋತ್ಕರ್ ತಮ್ಮ ಜನ್ಮದಿನಾಚರಣೆಯನ್ನು ಆಚರಿಸಿಕೊಂಡರು.

ಬಳ್ಳಾರಿ ನಗರದ ಮಾಜಿ ಶಾಸಕರು ಹಾಗೂ ಕೆಎಂಎಫ್‌ನ ಮಾಜಿ ರಾಜ್ಯಾಧ್ಯಕ್ಷರು ಮತ್ತು ಬಿಜೆಪಿಯ ಹಿರಿಯ ಧುರೀಣರಾದ ಗಾಲಿ ಸೋಮಶೇಖರರೆಡ್ಡಿ ಶ್ರೀನಿವಾಸ್ ಮೋತ್ಕರ್‌ಗೆ ಆತ್ಮೀಯವಾಗಿ ಸನ್ಮಾನಿಸಿ, ಸತ್ಕರಿಸಿದರು. ಶ್ರೀನಿವಾಸ್ ಮೋತ್ಕರ್ ತಮ್ಮ ಜನ್ಮದಿನಾಚರಣೆಯ ಅಂಗವಾಗಿ ಪಾಲಿಕೆಯ 24ನೇ ವಾರ್ಡ್‌ನ ಶ್ರೀನಗರ ಬಡಾವಣೆಯಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಬೆಳಿಗ್ಗೆ ಭೇಟಿ ನೀಡಿ, ಪೂಜೆ ಸಲ್ಲಿಸಿ, ಭಕ್ತಾದಿಗಳಿಗೆ, ಬಿಜೆಪಿ ಕಾರ್ಯಕರ್ತರಿಗೆ ಪ್ರಸಾದ ವಿತರಣೆ ಮಾಡಿದರು.

# ವಾಟ್ಸ್‌ಪ್ ವೀಕ್ಷಣೆ ಜಗತ್ತಿನಲ್ಲಿ ಭಾರತವೇ ನಂ.1: ಬಲಿಯಾಗುತ್ತಿರುವ ವಿದ್ಯಾರ್ಥಿಗಳು




**ಗೋಕರ್ಣ, ಜು.10:** ಸಾಮಾಜಿಕ ಜಾಲತಾಣ ಎನ್ನುವುದು ಈಗ ಅತಿ ಕಿರಿಯ ಮಕ್ಕಳವರೆಗೂ ಬಂದು ನಿಂತಿದೆ. ಒಂದು ಹಂತದಲ್ಲಿ ಕರೊನಾ ಬಂದ ನಂತರ ಸಾಮಾಜಿಕ ಜಾಲತಾಣ ಇನ್ನಷ್ಟು ಹೆಚ್ಚುವಂತಾಯಿತು. ಮಕ್ಕಳಿಗೆ ಆನ್‌ಲೈನ್ ಕ್ಲಾಸ್ ಹೆಚ್ಚಾದಂತೆ ಸಾಮಾನ್ಯ ವಿದ್ಯಾರ್ಥಿಗಳವರೆಗೂ ಮೊಬೈಲ್ ಅನಿವಾರ್ಯವಾಯಿತು. ಆದರೆ ಕರೊನಾ ಕತೆ ಮುಗಿದು ಹೋದರೂ ಕೂಡ ಆನ್‌ಲೈನ್ ಕ್ಲಾಸ್ ಇಲ್ಲದಿದ್ದರೂ ಸಾಮಾಜಿಕ ಜಾಲತಾಣಕ್ಕೆ ಮಕ್ಕಳು ಒಳಗಾಗಿದ್ದಾರೆ. 2009ರಲ್ಲಿ ಆರಂಭಗೊಂಡ ವಾಟ್ಸ್‌ಪ್ ಎನ್ನುವ ಒಂದು ಮಾಯಾಲೋಕ ಈಗ ಜಗತ್ತಿನ ಅತಿದೊಡ್ಡ ಮೆಸೇಜಿಂಗ್ ಅಪ್ಲಿಕೇಶನ್ ಆಗಿದೆ. ವಿಶ್ವದಾದ್ಯಂತ 330 ಕೋಟಿ ಬಳಕೆದಾರರಿದ್ದಾರೆ. 230 ಕೋಟಿ ಬಳಕೆದಾರರು ಪ್ರತಿನಿತ್ಯವೂ ಅದನ್ನು ಬಳಸುತ್ತಿದ್ದಾರೆ. ಹಾಗೇ ನೋಡಿದರೆ ಈ ವಾಟ್ಸ್‌ಪ್‌ಗೆ ಭಾರತವೇ ದೊಡ್ಡ ಮಾರುಕಟ್ಟೆಯಾಗಿದೆ. ಭಾರತದಲ್ಲಿ 85.3 ಕೋಟಿ ಬಳಕೆದಾರರಿದ್ದಾರೆ. 180 ದೇಶಗಳಲ್ಲಿ ವಾಟ್ಸ್‌ಪ್ ಬಳಕೆದಾರರಿದ್ದು, 60 ಭಾಷೆಯಲ್ಲಿ ಲಭ್ಯವಿದೆ ಎಂದು ವಾಟ್ಸ್‌ಪ್ ಹೇಳಿಕೊಂಡಿದೆ.

# ಹಾಸ್ಟೆಲ್‌ಗಳಲ್ಲಿ ಕೇರ್ ಟೇಕರ್‌ಗಳ ಪಾತ್ರ ಮಹತ್ವದ್ದು: ಪ್ರೊ.ಬಸವರಾಜ ಕುಬಕಡ್ಡಿ

**ಕಲಬುರಗಿ, ಜು. 10:** ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿ, ಅವರ ಸುರಕ್ಷತೆ ಮತ್ತು ಯೋಗಕ್ಷೇಮ ವಿಚಾರಿಸುವಲ್ಲಿ ಹಾಸ್ಟೆಲ್ ಕೇರ್‌ಟೇಕರ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ಬಸವರಾಜ ಕುಬಕಡ್ಡಿ ಹೇಳಿದರು.

ಇಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ವಿದ್ಯಾರ್ಥಿ ಕಲ್ಯಾಣ ವಿಭಾಗದಿಂದ ಹಾಸ್ಟೆಲ್ ಕೇರ್ ಟೇಕರ್‌ಗಳಿಗೆ ನಡೆದ 'ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ: ಜಾಗೃತಿ, ಗುರುತಿಸುವಿಕೆ ಮತ್ತು ಪ್ರತಿಕ್ರಿಯೆ' ವಿಷಯದ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

'ದೇಶದ ಎಲ್ಲ ಭಾಗದ ವಿದ್ಯಾರ್ಥಿಗಳು ಸಿಯುಕೆ ಕ್ಯಾಂಪಸ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಭಾಷೆ, ಸಂಸ್ಕೃತಿ, ಆಹಾರ ಪದ್ಧತಿ ಹಾಗೂ ಸಾಮಾಜಿಕ ಹಿನ್ನೆಲೆ ಭಿನ್ನವಾಗಿರುತ್ತದೆ. ಇಂತಹ ಬಹು ಸಾಂಸ್ಕೃತಿಕ ವಸತಿ ನಿಲಯಗಳ ವಾತಾವರಣದಲ್ಲಿ ಕೇರ್ ಟೇಕರ್‌ಗಳು ಆಡಳಿತಾತ್ಮಕ ಜವಾಬ್ದಾರಿ ನಿರ್ವಹಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಮಾರ್ಗ ದರ್ಶಕ, ಸಲಹೆಗಾರ ಹಾಗೂ ಪೋಷಕರಂತೆ ಕಾರ್ಯನಿರ್ವಹಿಸಬೇಕು' ಎಂದು ಹೇಳಿದರು.



# BUNTS SANGHA MUMBAI

## BORIVALI EDUCATIONAL COMMITTEE

I.C. Colony, Borivali West, Mumbai - 400 103.


Bunts Sangha's Shashikiran Shetty Educational Institutions Borivali Since 1998 | Bunts Sangha's Arathi Shetty Icon School | Bunts Sangha's Leelavati Hegde School

## Bunts Sangha's Shashikiran Shetty Educational Institutions Borivali
## Bunts Sangha's Arathi Shetty Icon School
## Leelavati Hegde School (Proposed CBSE)

CORDIALLY INVITE YOU TO THE

# GRAND OPENING & DONOR FELICITATION CEREMONY

**of Bunts Sangha's Shashikiran Shetty Educational Institutions, Borivali.**



**On Sunday, 12th July 2026 at 7.00 a.m. at The Institution Auditorium - Basement 1**

Presided by




**Shri Praveen Bhoja Shetty**
President-Bunts Sangha Mumbai

Inauguration by




**Shri Piyush Goyal**
Hon. Union Minister of Commerce and Industry, Govt. of India

Chief Guests | Guests of Honour




**Shri Shashikiran Shetty** – Title Donor & Chairman, Allcargo Logistics Ltd.
**Smt. Arathi Shashikiran Shetty** – Title Donor
**Smt. Leelavati S. Hegde** – Title Donor
**Shri Gopal C. Shetty** – Ex-Member of Parliament
**Smt. Manisha Ashok Chaudhary** – MLA (Dahisar)

## OUR PRIME DONORS



**Shri K. M. Shetty** – CMD. V. K. GROUP
**Dr. Sadashiv K. Shetty** – Chairman Heranba Industries Ltd.
**Dr. P. V. Shetty** – Ex- Jt. Sec. Mumbai Cricket Association
**Shri Ravi S. Shetty** – Sal Palace Group of Hotels
**Shri Raghuram K. Shetty** – Hotel Ramdeo, Belgavi
**Dr. R. K. Shetty** – CMD, ISSAR Financial Pvt. Ltd.



**Shri Praveen Bhoja Shetty** – President, Bunts Sangha Mumbai
**Dr. K. Prakash Shetty** – CMD, MRG Group
**Shri Hardeesh Kumar** – Director, IBPS
**Shri Ravindra Sadhu Shetty** – CMD, Veg Treat Group of Hotels
**Shri Padmanabh Payyade** – CMD, Sampoorna Hotels Pvt. Ltd.


## BUNTS SANGHA MUMBAI



**Shri Mahesh S. Shetty** – Vice President
**Dr. R. K. Shetty** – Hon. Gen Secretary
**CA. Ramesh Shetty** – Hon. Treasurer
**Shri Girish Shetty Tellar** – Jt. Secretary
**Shri Shasidhar K.Shetty** – Jt. Treasurer
**Smt. Chitra R. Shetty** – Chairperson-Ladies Wing
**Shri Savin J. Shetty** – Chairman, Youth Wing

**Trustees, Past Presidents, Managing Council Members, 9 Regional Committees, Regional Co-ordinators, Mahila Vibhag and Youth Wing of Bunts Sangha Mumbai**

## BORIVALI EDUCATION COMMITTEE



**Shri Ravindra Sadhu Shetty** – Chairman BEC
**Dr. P. V. Shetty** – Chairman Advisory Committee
**Shri Nityanand Hegde** – Vice Chairman BEC
**Shri Yermal Harish Shetty** – Vice Chairman BEC
**CA Jagdish Shetty** – Secretary BEC
**CA Aditya Shetty** – Treasurer BEC
**Dr. R. K. Shetty** – Coordinator BEC
**Shri Mundappa Payyade** – Chairman Fund Collection
**Shri Ravi Shetty** – Convener-Infra (BEC)
**Shri Chandrahas K.Shetty** – Convener-Infra (BEC)
**Shri Kiran Shetty** – Co-Convener - Infra (BEC)
**Shri Ashok V. Shetty** – Co-Convener Academics

All Borivali Education Committee Members, Principals & Staff BS-ASIS (Cambridge) & BS-LHS (CBSE)

PROGRAMME: Shri Satyanarayana Pooja @ 7:00 a.m - 8:30 a.m, Saraswati Devi Pratisthapana @ 8:30 a.m - 9:00 a.m. Tea & Snacks @ 9:00 a.m - 9:30 a.m.
Inauguration Ceremony & Stage Function @ 9:30 a.m - 1:30 p.m. Lunch @ 1:30 p.m Onwards. Inauguration Ceremony & Stage Function will continue Post Lunch till 4.00 p.m.
Request the pleasure of your gracious presence to bless this occasion.